ಸಂಪುಟ : 8 ಸಂಚಿಕೆ 307 ಪುಟ : 4 ಬೆಲೆ : 3.00 ಶುಕ್ರವಾರ ಜನೆವರಿ 19, 2024 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ...


VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 307 Pages : 4 Price : 3.00 Friday JANUARY 19, 2024 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

## ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಅವರ ಜಿಲ್ಲಾ ಪ್ರವಾಸ ಕಾರ್ಯಕ್ರಮ

■ವಿಜಯಸಾಕ್ಷಿ ಸುದ್ದಿ, ಗದಗ



ರಾಜ್ಯ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಅವರು ಜನವರಿ 19 ರಂದು ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳಲಿದ್ದು, ವಿವರ ಇಂತಿದೆ.

ಜ. 19ರಂದು ಸಂಜೆ 7.30 ಗಂಟೆಗೆ ನವಲಗುಂದದಿಂದ ರಸ್ತೆ ಮೂಲಕ ಗದುಗಿಗೆ ಆಗಮಿಸುವರು. ಜ. 20 ರಂದು ಬೆ. 11 ರಿಂದ 12 ರವರೆಗೆ ನಗರದ ಶ್ರೀ ತೋಂಟದ ಸಿದ್ಧಲಿಂಗೇಶ್ವರ ಕಲ್ಯಾಣ ಕೇಂದ್ರದಲ್ಲಿ ಕನ್ಸಲ್ಟಿಂಗ್ ಸಿವಿಲ್ ಇಂಜನೀಯರ್ಸ್ ಅಸೋಸಿಯೇಶನ್ (BUILDMAT 2024 EXHIBITION) ದಲ್ಲಿ ಪಾಲ್ಗೊಳ್ಳುವರು.

ಮಧ್ಯಾಹ್ನ 12 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ 5 ಗ್ಯಾರಂಟಿಗಳ ಅನುಷ್ಠಾನ ಪ್ರಗತಿ ಪರಿಶೀಲನೆ ಮತ್ತು ಜನತಾ ದರ್ಶನ ಕುರಿತು ಪ್ರಗತಿ ಪರಿಶೀಲನೆ ನಡೆಸುವರು. ಸಂಜೆ 5 ಗಂಟೆಗೆ ನಗರದ ಪಂಚಾಚಾರ್ಯ ಮಾಂಗಲ್ಯ ಮಂದಿರದಲ್ಲಿ ಗದಗ ಜಿಲ್ಲಾ ವೀರಶೈವ ಲಿಂಗಾಯತ ಮಹಾಸಭಾ ( ರಿ) ಬೆಂಗಳೂರು, ಜಿಲ್ಲಾ ಘಟಕ ಗದಗ ಇವರಿಂದ 2022-23ನೇ ಸಾಲಿನ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಪಾಲ್ಗೊಳ್ಳುವರು ಎಂದು ಸಚಿವರ ಆಪ್ತ ಕಾರ್ಯದರ್ಶಿಗಳ ಕಾರ್ಯಾಲಯದ ಪ್ರಕಟಣೆ ತಿಳಿಸಿದೆ.

## ಇಂದಿನ ನೀರು ಪೂರೈಕೆ ವಿವರ

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಬೆಟಗೇರಿ ಅವಳಿ ನಗರದಲ್ಲಿ ಜನವರಿ 19 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

ಸ್ಥಳಗಳ ವಿವರ : ವಾರ್ಡ್ ನಂ. 15,16,17 ಶಹಾಪುರ ಪೇಟೆ, ಡಿಸಿ ಮಿಲ್ ರೋಡ್, ಜವಳಗಲ್ಲಿ, ಮೀನಿನ ಮಾರ್ಕೆಟ್ ರೋಡ್, ಕರ್ನಾಟಕ ಟಾಕೀಸ್ ಲೈನ್, ಅಂಗನವಾಡಿ ಬಸವೇಶ್ವರ ಗುಡಿ ಲೈನ್, ಗಣೇಶ ಗುಡಿ ಲೈನ್ ಕೆಲವು ಭಾಗಗಳು.

ವಾರ್ಡ್ ನಂ. 22 ಈಶ್ವರ ಗುಡಿ 2000, 1800, 1600, 1400, 630 ಮನೆಗಳು, ಬಸ್ ಸ್ಟಾಪ್ ಹಿಂದಿನ ಭಾಗ- ಮುಂದಿನ ಭಾಗ ದೊಡ್ಡ ಮಸೂತಿ ಲೈನ್. ವಾರ್ಡ್ ನಂ. 21, 22, 23 ಮೆಹರ್‌ವಾಡೆ ಲೈನ್, ಶರಣಪ್ಪ ಮತ್ತು ಹಳೆ ಲೈನ್, ರಾಮದಾಸ, ಸುಡಗಾಡ ಗಟ್ಟಿ 4 ಭಾಗ, ಮುನವಳ್ಳಿ ಪ್ಲಾಟ್, ಕಮತರ್ ಪ್ಲಾಟ್, ಹಕ್ಕಿಯವರ ಪ್ಲಾಟ್, ಭೂಮಾ ಲೈನ್, ಗುಳಗುಂದಿ.

ವಾರ್ಡ್ ನಂ. 29 ರಾಜೀವ ಗಾಂಧಿ ಹಳೆ ಲೈನ್ 2ನೇ ಕ್ರಾಸ್, 5 ನೇ ಕ್ರಾಸ್ ಪಂಚಾಕ್ಷರಿ ನಗರ 3ನೇ ಕ್ರಾಸ್. ವಾರ್ಡ್ ನಂ. 11, 12 ನಿಸರ್ಗ ಬಡಾವಣೆ, ರಿಂಗ್ ರೋಡ್ ಶಿವಬಸವ ನಗರ, ಅಬ್ದುಲ್ ಕಲಾಂ ರೋಡ್ ಕೆಲವು ಭಾಗಗಳು. ವಾರ್ಡ್ ನಂ. 5 ತಟ್ಟಿಯವರ ಲೈನ್, ನಾವಳ್ಳಿಯವರ ಲೈನ್, ಮಳಲಿ, ಪೂಜಾರರವರ ಲೈನ್, ಪಣಿಬಂದ ಅವರ ಲೈನ್.

ಈಗಾಗಲೇ ಕುಡಿಯುವ ನೀರಿನ ನಳ ಹೊಂದಿರುವ ಬಾಕಿದಾರರ ಪಟ್ಟಿ ತಯಾರಿಸಿದ್ದು, ನಾಗರಿಕರು ಕೂಡಲೇ ತಮ್ಮ ಕುಡಿಯುವ ನೀರಿನ ಬಾಕಿ ಕರವನ್ನು ಸಂದಾಯ ಮಾಡುವಂತೆ ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಫೆ.12ರಿಂದ ವಿಧಾನಮಂಡಲ ಅಧಿವೇಶನ, ಫೆ.16ಕ್ಕೆ ರಾಜ್ಯ ಬಜೆಟ್ ಮಂಡನೆ

■ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಫೆಬ್ರವರಿ 12ರಿಂದ ಫೆಬ್ರವರಿ 23ರವರೆಗೆ ರಾಜ್ಯ ವಿಧಾನಮಂಡಲ ಅಧಿವೇಶನ ನಡೆಸಲು ಗುರುವಾರ ನಡೆದ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳಲಾಗಿದೆ.

ಗುರುವಾರು ವಿಧಾನಸೌಧದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಫೆಬ್ರವರಿ 12ರಿಂದ ಫೆಬ್ರವರಿ 23ರವರೆಗೆ ಅಧಿವೇಶನ ನಡೆಸಲು ಮತ್ತು ಫೆಬ್ರವರಿ 16ರಂದು ರಾಜ್ಯ ಬಜೆಟ್ ಮಂಡಿಸಲು ನಿರ್ಧರಿಸಲಾಗಿದೆ.

## ಮಾರ್ಗಾಧಿಕಾರಿಗಳ ನೇಮಕ

■ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ಲೋಕಸೇವಾ ಆಯೋಗವು ವಾಣಿಜ್ಯ ತೆರಿಗೆ ಇಲಾಖೆಯಲ್ಲಿನ ಉಳಿಕೆ ಮೂಲ ವೃಂದದ ವಾಣಿಜ್ಯ ತೆರಿಗೆ ಪರಿವೀಕ್ಷಕರ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಜ. 20, 21ರಂದು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸಲಿದೆ.

ಈ ಪರೀಕ್ಷೆಗಳು ಸುಗಮವಾಗಿ ಮತ್ತು ವ್ಯವಸ್ಥಿತವಾಗಿ ಜರುಗಿಸಲು ಜ.20ರಂದು 6 ಪರೀಕ್ಷಾ ಕೇಂದ್ರಗಳಿಗೆ ಹಾಗೂ ಜ.21ರಂದು 8 ಪರೀಕ್ಷಾ ಕೇಂದ್ರಗಳಿಗೆ ಮಾರ್ಗಾಧಿಕಾರಿಗಳನ್ನು ನೇಮಕ ಮಾಡಲಾಗಿದೆ. ನೇಮಕ ಮಾಡಲಾದ ಮಾರ್ಗಾಧಿಕಾರಿಗಳು ನಿಗದಿಪಡಿಸಿದ ತಮ್ಮ ಕರ್ತವ್ಯ ನಿರ್ವಹಿಸತಕ್ಕದ್ದು ಎಂದು ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪರೀಕ್ಷಾ ಮುಖ್ಯ ಮೇಲ್ವಿಚಾರಕರಾದ ವೈಶಾಲಿ ಎಂ.ಎಲ್. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪ್ರವೇಶ ಪರೀಕ್ಷೆ: ವಿಚಕ್ಷಕ ದಳದ ನೇಮಕ

■ವಿಜಯಸಾಕ್ಷಿ ಸುದ್ದಿ, ಗದಗ

ಜನೆವರಿ 20ರಂದು ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 1.30 ಗಂಟೆಯವರೆಗೆ ಜವಾಹರ ನವೋದಯ ವಿದ್ಯಾಲಯದ ಪ್ರವೇಶ ಪರೀಕ್ಷೆಗಳು ಜಿಲ್ಲೆಯ 18 ಪರೀಕ್ಷಾ ಕೇಂದ್ರಗಳಲ್ಲಿ ಜರುಗಲಿವೆ. ಈ ಪರೀಕ್ಷೆ ಸುಗಮವಾಗಿ ಹಾಗೂ ನಿಷ್ಪಕ್ಷಪಾತವಾಗಿ ಜರುಗಿಸುವ ಉದ್ದೇಶದಿಂದ ವಿಚಕ್ಷಕ ದಳವನ್ನು ನೇಮಕ ಮಾಡಲಾಗಿದೆ. ಜನೆವರಿ 20ರಂದು ಜರುಗುವ ನವೋದಯ ವಿದ್ಯಾಲಯ ಪರೀಕ್ಷಾ ಕೇಂದ್ರಗಳಿಗೆ ಪರೀಕ್ಷಾ ವೇಳೆಯಲ್ಲಿ ದಳದ ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲಿಸಬೇಕೆಂದು ಜಿಲ್ಲಾಧಿಕಾರಿ ಮತ್ತು ಜಿಲ್ಲಾ ದಂಡಾಧಿಕಾರಿ ವೈಶಾಲಿ ಎಂ.ಎಲ್. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವಿವಿಧ ಜಿಲ್ಲಾ ಸಮಿತಿಗಳ ಸಭೆಯಲ್ಲಿ ನ್ಯಾ.ಮೂ ಕೆ. ಗುರುಪ್ರಸಾದ

# ಕಾನೂನು ಅರಿವು ಮೂಡಿಸುವ ಕೆಲಸವಾಗಲಿ

■ವಿಜಯಸಾಕ್ಷಿ ಸುದ್ದಿ, ಗದಗ

ಜಿಲ್ಲೆಯಲ್ಲಿ ಮಕ್ಕಳ ಗ್ರಾಮಸಭೆಗಳನ್ನು ನಿಯಮಿತವಾಗಿ ಹಾಗೂ ಕಡ್ಡಾಯವಾಗಿ ಜರುಗಿಸಬೇಕು. ಗ್ರಾಮ ಸಭೆಗಳಲ್ಲಿ ಬಾಲ್ಯ ವಿವಾಹ ನಿಷೇಧ ಹಾಗೂ ಪೋಕ್ಸೋ ಕಾಯ್ದೆಯ ಕುರಿತು ಜಾಗೃತಿ ಮೂಡಿಸಬೇಕು ಎಂದು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಕೆ. ಗುರುಪ್ರಸಾದ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಗುರುವಾರ ಮಹಿಳಾ ಇಲಾಖೆಯ ವಿವಿಧ ಸಮಿತಿ ಸಭೆಗಳಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ತೀವ್ರ ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳನ್ನು ಗುರುತಿಸಿ ವಿಳಂಬ ಮಾಡದೇ ಅವರ ಆರೋಗ್ಯ ಸುಧಾರಣೆಗಾಗಿ ಎನ್‌ಆರ್‌ಸಿ (ಪೌಷ್ಟಿಕಾಂಶ ಪುನರ್ವಸತಿ ಕೇಂದ್ರ) ಕೇಂದ್ರಗಳಿಗೆ ದಾಖಲಿಸಲು ಕ್ರಮ ವಹಿಸಬೇಕು. ಮಹಿಳಾ ಮತ್ತು ಮಕ್ಕಳ ಶ್ರೇಯೋಭಿವೃದ್ಧಿಗಾಗಿ ಇಲಾಖೆಯಿಂದ ಅನುಷ್ಠಾನಗೊಂಡಿರುವ ವಿವಿಧ ಯೋಜನೆಗಳ ಸೌಲಭ್ಯ ಅರ್ಹ ಫಲಾನುಭವಿಗಳಿಗೆ ದೊರಕುವಂತಾಗಬೇಕು. ಮಹಿಳಾ ಮತ್ತು ಮಕ್ಕಳ ದೌರ್ಜನ್ಯ, ಮಹಿಳೆಯರ ಮತ್ತು ಮಕ್ಕಳ ಸಾಗಾಟ, ಕೌಟುಂಬಿಕ ದೌರ್ಜನ್ಯ, ಬಾಲ್ಯವಿವಾಹ ಸೇರಿದಂತೆ ವಿವಿಧ ಪ್ರಕರಣಗಳ ಶೀಘ್ರ ಇತ್ಯರ್ಥಕ್ಕೆ ಕ್ರಮ ವಹಿಸಬೇಕು ಎಂದು ಕೆ.ಗುರುಪ್ರಸಾದ ಅಧಿಕಾರಿಗಳಿಗೆ ಸೂಚಿಸಿದರು.



ಪದವಿಪೂರ್ವ ಕಾಲೇಜು ಹಾಗೂ ಪ್ರೌಢಶಾಲೆಗಳಲ್ಲಿಯೂ ಸಹ ಬಾಲ್ಯ ವಿವಾಹ ನಿಷೇಧ ಹಾಗೂ ಪೋಕ್ಸೋ ಕಾಯ್ದೆಯ ಕುರಿತು ಅರಿವು ಮೂಡಿಸುವ ಕೆಲಸವಾಗಬೇಕು. 'ಬೇಟಿ ಬಚಾವೋ ಬೇಟಿ ಪಡಾವೋ' ಯೋಜನೆ ಇನ್ನೂ ಹೆಚ್ಚು ಪರಿಣಾಮಕಾರಿಯಾಗುವ ದಿಸೆಯಲ್ಲಿ ಲಿಂಗಾನುಪಾತ ಕಡಿಮೆ ಇರುವ ತಾಲೂಕು ಹಾಗೂ ಗ್ರಾಮ ಪಂಚಾಯತ್‌ಗಳಲ್ಲಿ ಅರಿವು ಮೂಡಿಸುವ ಕೆಲಸವಾಗಬೇಕು. ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳಿಗೆ ಶುದ್ಧ ಕುಡಿಯುವ ನೀರು ಪೂರೈಕೆ ಸೇರಿದಂತೆ ಮೂಲಭೂತ ಸೌಲಭ್ಯಗಳು ಇರುವಂತೆ ನೋಡಿಕೊಳ್ಳಬೇಕು ಎಂದು ನ್ಯಾ.ಮೂ ಕೆ. ಗುರುಪ್ರಸಾದ ಹೇಳಿದರು.

ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ ಎಂ. ಮಾತನಾಡಿ, ಮಹಿಳಾ ಇಲಾಖೆಯ ವಿವಿಧ ಯೋಜನೆಗಳ ಸೌಲಭ್ಯಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸಲು ಅಧಿಕಾರಿಗಳು ಆಸಕ್ತಿಯಿಂದ ಕಾರ್ಯ ನಿರ್ವಹಿಸಬೇಕೆಂದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಪಿ.ವೈ. ಶೆಟ್ಟೆಪ್ಪನವರ ಮಾತನಾಡಿ, ಬಾಲ್ಯ ವಿವಾಹ ನಿಷೇಧ ಕಾಯ್ದೆ ಕುರಿತು ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜುಗಳಲ್ಲಿ ಒಟ್ಟು 11 ಅರಿವು ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಮಹಿಳೆಯರ ಮತ್ತು ಮಕ್ಕಳ ದೌರ್ಜನ್ಯ ತಡೆ ಕಾಯ್ದೆಯಡಿ ತಾಲೂಕಾ ಮಟ್ಟದಲ್ಲಿ 5 ಸಭೆಗಳನ್ನು ಮತ್ತು ಗ್ರಾ.ಪಂ ಮಟ್ಟದಲ್ಲಿ 122 ಸಭೆಗಳನ್ನು ಆಯೋಜಿಸಿ ಅರಿವು ಮೂಡಿಸಲಾಗಿದೆ. 2023-24ನೇ ಸಾಲಿನ ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆಯಡಿ ಡಿಸೆಂಬರ್ 2023ರವರೆಗೆ ಒಟ್ಟು 89 ಪ್ರಕರಣಗಳು ದಾಖಲಾಗಿದ್ದು, ಆ ಪೈಕಿ 25 ಪ್ರಕರಣಗಳು ಇತ್ಯರ್ಥಗೊಂಡಿವೆ. 64 ಪ್ರಕರಣಗಳು ಬಾಕಿ ಇದ್ದು, 32 ಪ್ರಕರಣಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ.

ಅಂಗನವಾಡಿ ಕೇಂದ್ರಗಳಲ್ಲಿನ 89 ತೀವ್ರ ಅಪೌಷ್ಟಿಕ ಮಕ್ಕಳನ್ನು ಗುರುತಿಸಲಾಗಿದ್ದು, ಅದರಲ್ಲಿ ಈಗ 24 ಮಕ್ಕಳಲ್ಲಿ ಸುಧಾರಣೆ ಕಂಡು ಬಂದಿದೆ. 30 ಮಕ್ಕಳನ್ನು ಎನ್‌ಆರ್‌ಸಿ (ಪೌಷ್ಟಿಕಾಂಶ ಪುನರ್ವಸತಿ ಕೇಂದ್ರ)ಗೆ ದಾಖಲಿಸಲಾಗಿದೆ. ಅಂಗನವಾಡಿ ಕೇಂದ್ರಗಳ ಮಕ್ಕಳಿಗೆ ಪೌಷ್ಟಿಕಾಂಶ ಹೆಚ್ಚಿಸಿ ಆರೋಗ್ಯ ಸುಧಾರಿಸಲು ನಿಯಮಿತವಾಗಿ ಮೊಟ್ಟೆಯನ್ನು ವಿತರಣೆ ಮಾಡಲಾಗುತ್ತಿದೆ. ಬೇಟಿ ಬಚಾವೋ, ಬೇಟಿ ಪಡಾವೋ ಹಾಗೂ ಪ್ರಧಾನಮಂತ್ರಿ ಮಾತೃವಂದನಾ ಯೋಜನೆ ಕುರಿತು ಅರಿವು ಮೂಡಿಸಲಾಗುತ್ತಿದ್ದು, ಅಡಿ ಕಡಿಮೆ ಲಿಂಗಾನುಪಾತ ಇರುವ ತಾಲೂಕು/ಗ್ರಾ.ಪಂ ಮಟ್ಟದಲ್ಲಿ ಜಾಗೃತಿ ಮೂಡಿಸಲು ಬೀದಿ ನಾಟಕಗಳನ್ನು ಆಯೋಜಿಸಲಾಗುತ್ತಿದೆ ಎಂದು ಸಭೆಗೆ ಮಾಹಿತಿ ನೀಡಿದರು.

ಸಭೆಯಲ್ಲಿ ಸಖಿ ಒನ್ ಸ್ಟಾಪ್ ಸೆಂಟರ್, ಸ್ವೀಕಾರ ಕೇಂದ್ರ, ಬಾಲಕಿಯರ ವಸತಿ ನಿಲಯ, ಸ್ವಾಧಾರ ಗೃಹ, ಉಜ್ವಲ, ವಿಧವಾ ಕೋಶ, ಐ.ಸಿ.ಡಿ.ಎಸ್. ಸಮನ್ವಯ, ದಮನಿತ ಮಹಿಳೆಯರ/ಟ್ರಾನ್ಸ್ ಜೆಂಡರ್ಸ್, ಸಾಂತ್ವನ, ಶಿಶುಪಾಲನಾ ಕೇಂದ್ರ, ಸ್ತ್ರೀಶಕ್ತಿ ಸಮನ್ವಯ, ಜಿಲ್ಲಾ ಬಾಲಭವನ ಸಮಿತಿ ವಿವಿಧ ಯೋಜನೆಗಳ ಪ್ರಗತಿ ಪರಿಶೀಲನೆ ಜರುಗಿತು.

ಸಭೆಯಲ್ಲಿ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಬಿ. ಸಂಕದ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ರಾಧಾ ಮಣ್ಣೂರ, ಎಲ್ಲ ತಾಲೂಕಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಉದ್ಯೋಗ ವಿನಿಮಯ ಇಲಾಖೆ ಅಧಿಕಾರಿ ಬಸವಂತಪ್ಪ, ವಿವಿಧ ಇಲಾಖೆ ಅಧಿಕಾರಿಗಳು, ಸಂಘ ಸಂಸ್ಥೆಗಳ ಮುಖ್ಯಸ್ಥರು ಹಾಜರಿದ್ದರು.

### 10ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಪೂರ್ವಭಾವಿ ಸಭೆಯಲ್ಲಿ ಶಾಸಕ ಜಿ.ಎಸ್. ಪಾಟೀಲ


# ಸಮ್ಮೇಳನವನ್ನು ಅರ್ಥಪೂರ್ಣವಾಗಿ ಆಚರಿಸೋಣ

■ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ಪಟ್ಟಣದಲ್ಲಿ ಫೆ.24, 25ರಂದು ನಡೆಯುವ 10ನೇ ಜಿಲ್ಲಾ ಮಟ್ಟದ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಅದ್ದೂರಿ ಹಾಗೂ ಸಂಭ್ರಮದಿಂದ ಯಶಸ್ವಿಗೊಳಿಸಲು ಎಲ್ಲರೂ ಶ್ರಮಿಸೋಣ ಎಂದು ಶಾಸಕ ಜಿ.ಎಸ್. ಪಾಟೀಲ ಹೇಳಿದರು.

ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಹಿನ್ನೆಲೆಯಲ್ಲಿ ಪಟ್ಟಣದ ಜಿ.ಕೆ. ಬಂಡಿ ಗಾರ್ಡನ್‌ನಲ್ಲಿ ನಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕರ್ನಾಟಕ ಸುವರ್ಣ ಸಂಭ್ರಮ ಸಂದರ್ಭದಲ್ಲಿ ಜಿಲ್ಲೆಯ ಪ್ರಮುಖ ತಾಲೂಕಾ ಕೇಂದ್ರವಾಗಿರುವ ಗಜೇಂದ್ರಗಡ ಪಟ್ಟಣದಲ್ಲಿ 10ನೇ ಜಿಲ್ಲಾ ಮಟ್ಟದ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯುತ್ತಿರುವುದು ಖುಷಿ ತಂದಿದೆ. ಸಮ್ಮೇಳನವನ್ನು ಅರ್ಥಪೂರ್ಣವಾಗಿ ನಡೆಸಲು ಅಗತ್ಯ ನೆರವಿನೊಂದಿಗೆ ಸಂಪೂರ್ಣ ಸಹಕಾರ ನೀಡಲಾಗುವುದು ಎಂದರು.



ಕಸಾಪ ಜಿಲ್ಲಾಧ್ಯಕ್ಷ ವಿವೇಕಾನಂದಗೌಡ ಪಾಟೀಲ ಮಾತನಾಡಿ, ಕವಿ, ಪ್ರೊ. ಚಂದ್ರಶೇಖರ ವಸ್ತ್ರದ ಅವರನ್ನು ಸಮ್ಮೇಳನಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದ್ದು, ಫೆ.23ರಂದು ಜಕ್ಕಲಿ ಗ್ರಾಮದ ದಿ.ಅಂದಾನಪ್ಪ ದೊಡ್ಡಮೇಟಿ ಅವರ ನಿವಾಸದಿಂದ ಆರಂಭವಾಗುವ ಕನ್ನಡ ಜ್ಯೋತಿ, ತಾಯಿ ಭುವನೇಶ್ವರಿ ಭಾವಚಿತ್ರದ ಮೆರವಣಿಗೆಯು ನರೇಗಲ್, ನಿಡಗುಂದಿ ಗ್ರಾಮದ ಮೂಲಕ ಪಟ್ಟಣಕ್ಕೆ ಆಗಮಿಸಲಿದೆ. 10ನೇ ಸಾಹಿತ್ಯ ಸಮ್ಮೇಳನದ ಲಾಂಛನ ಬಿಡುಗಡೆ, ವಿವಿಧ ಸಮಿತಿಗಳ ರಚನೆ ಹಾಗೂ ಕಾರ್ಯಕ್ರಮ ನಡೆಯುವ ಸ್ಥಳ ನಿಗದಿ, ವೇದಿಕೆಗಳಿಗೆ ಹೆಸರು, ಜಕ್ಕಲಿ ಗ್ರಾಮದಿಂದ ಆರಂಭವಾಗುವ ಮೆರವಣಿಗೆಗೆ ಚಾಲನೆ ನೀಡುವ ಗಣ್ಯರ ಹೆಸರು ಸೇರಿ ಇನ್ನಿತರ ಕೆಲಸ ಕಾರ್ಯಗಳ ಬಗ್ಗೆ ಮುಂದಿನ ಸಭೆಯಲ್ಲಿ ನಿರ್ಣಯವನ್ನು ಕೈಗೊಳ್ಳಲಾಗುವುದು ಎಂದರು.

ಸಭೆಯಲ್ಲಿ ಎಚ್.ಎಸ್. ಸೋಂಪುರ, ಸಿದ್ದಣ್ಣ ಬಂಡಿ, ವೀರಣ್ಣ ಶೆಟ್ಟರ, ಬಸವರಾಜ ಶೀಲವಂತರ, ರಾಜು ಸಾಂಗ್ಲೀಕರ, ಎ.ಡಿ. ಕೋಲಕಾರ, ಮಂಜುಳಾ ರೇವಡಿ, ಮುತುಂಜ್ಯಯ ದಢೇಸೂರಮಠ, ಗಣೇಶ ಗುಗಲೋತ್ತರ ಸೇರಿ ಇನ್ನಿತರರು 10ನೇ ಕನ್ನಡ ಸಾಹಿತ್ಯ ಸಮ್ಮೇಳನದ ಕುರಿತು ಅನೇಕ ಸಲಹೆ-ಸೂಚನೆಗಳನ್ನು ನೀಡಿದರು.

ಕಸಾಪ ತಾಲೂಕಾಧ್ಯಕ್ಷ ಅಮರೇಶ ಗಾಣಿಗೇರ, ಶಶಿಧರ ಹೂಗಾರ, ಶಿವರಾಜ ಘೋರ್ಪಡೆ, ಮುರ್ತುಜಾ ಡಾಲಯತ್, ಶರಣಪ್ಪ ರೇವಡಿ, ಸುಭಾನಸಾಬ ಆರಗಿದ್ದಿ, ಕೆ.ಎಸ್. ಕೊಡತಗೇರಿ, ಶಶಿಧರ ವಕ್ಕಲರ, ಅಪ್ಪು ಮತ್ತಿಕಟ್ಟಿ, ಎಂ.ವಾಯ್. ಅವಧೂತ ಇದ್ದರು.

### ವಿಶ್ವಗುರು ಬಸವೇಶ್ವರರನ್ನು ಕರ್ನಾಟಕದ ಸಾಂಸ್ಕೃತಿಕ ನಾಯಕರೆಂದು ಘೋಷಿಸಿದ ಸರ್ಕಾರ

# ಬಸವಾಭಿಮಾನಿಗಳಿಂದ ಸಂಭ್ರಮಾಚರಣೆ

■ವಿಜಯಸಾಕ್ಷಿ ಸುದ್ದಿ, ಗದಗ

ಗುರುವಾರ ಕರ್ನಾಟಕ ರಾಜ್ಯ ಸರ್ಕಾರದ ಸಚಿವ ಸಂಪುಟ ಸಭೆಯಲ್ಲಿ ಜಗಜ್ಯೋತಿ, ವಿಶ್ವಗುರು ಬಸವೇಶ್ವರರನ್ನು ಕರ್ನಾಟಕದ ಸಾಂಸ್ಕೃತಿಕ ನಾಯಕರೆಂದು ಘೋಷಿಸಿದ ಹಿನ್ನೆಲೆಯಲ್ಲಿ ಇಲ್ಲಿನ ಬಸವಪರ ಸಂಘಟನೆಗಳು ಹಾಗೂ ಬಸವಾಭಿಮಾನಿಗಳು ಸಂಭ್ರಮ ಆಚರಿಸಿದರು.

ನಗರದ ಬಸವೇಶ್ವರ ವೃತ್ತದಲ್ಲಿ (ಹತ್ತಿಕಾಳ ಕೂಟ) ನೆರೆದಿದ್ದ ಬಸವಭಕ್ತರು ವಿಶ್ವಗುರು ಬಸವಣ್ಣನವರಿಗೆ ಜಯಘೋಷ ಕೂಗಿ, ಬಸವೇಶ್ವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಸರ್ಕಾರದ ನಿರ್ಣಯವನ್ನು ಸ್ವಾಗತಿಸಿ, ಪರಸ್ಪರ ಸಿಹಿ ತಿನ್ನಿಸಿ ಸಂತಸ ಹಂಚಿಕೊಂಡರು.




ಈ ಸಂದರ್ಭದಲ್ಲಿ ಮಾತನಾಡಿದ ಅಶೋಕ ಬರಗುಂಡಿ, ಇದೊಂದು ಐತಿಹಾಸಿಕ ನಿರ್ಣಯವಾಗಿದ್ದು, ಘೋಷಣೆ ಮಾಡಿದ ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಅಭಿನಂದನಾರ್ಹರು. ಈ ಪ್ರಸ್ತಾವನೆಯನ್ನು ಮಂಡಿಸಿದ್ದ ಸಿ.ಎಸ್. ದ್ವಾರಕಾನಾಥ್ ಹಾಗೂ ಬರಗೂರು ರಾಮಚಂದ್ರಪ್ಪನವರಿಗೆ ಕೃತಜ್ಞತೆ ಸಲ್ಲಿಸಬೇಕಿದ್ದು, ಲಿಂ.ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳ ಕನಸು ಸಹ ಇದಾಗಿತ್ತು ಎಂದರು.

ಈ ಸಂದರ್ಭದಲ್ಲಿ ತೋಂಟದಾರ್ಯ ಮಠದ ಆಡಳಿತಾಧಿಕಾರಿ ಎಸ್.ಎಸ್. ಪಟ್ಟಣಶೆಟ್ಟರ, ಲಿಂಗಾಯತ ಪ್ರಗತಿಶೀಲ ಸಂಘದ ಅಧ್ಯಕ್ಷ ಶೇಖಣ್ಣ ಕಳಸಾಪೂರಶೆಟ್ಟರ, ಜಾಗತಿಕ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ಕೆ.ಎಸ್. ಚಟ್ಟಿ, ಕಾರ್ಯದರ್ಶಿ ಶೇಖಣ್ಣ ಕವಳಿಕಾಯಿ, ಬಸವದಳದ ಉಪಾಧ್ಯಕ್ಷ ಪ್ರಕಾಶ ಅಸುಂಡಿ, ಶ್ರೀಮಠದ ಮ್ಯಾನೇಜರ್ ಎಂ.ಎಸ್. ಅಂಗಡಿ, ಶಿವನಗೌಡ ಗೌಡರ, ಸಿ.ಎಸ್‌ಎ ಪಾಟೀಲ, ಎಂ.ಬಿ. ಲಿಂಗದಾಳ, ದಾನಯ್ಯ ಗಣಾಚಾರಿ, ಸಿದ್ದು ಅಂಗಡಿ, ಮಂಜುನಾಥ ಅಸುಂಡಿ, ಮೃತ್ಯುಂಜಯ ಜಿನಗಾ, ಸೋಮು ಪುರಾಣಿಕ, ಅಶೋಕ ಬಂಡೆಪ್ಪನವರ, ರಾಮು ಬಳ್ಳಾರಿ, ಶಿವಾನಂದ ಹಿರೇಮಠ, ಶಿವಕುಮಾರ ರಾಮನಕೊಪ್ಪ, ಆರ್.ಸಿ. ಹಿರೇಮಠ, ಬಸವರಾಜ ಹಿರೇಹಡಗಲಿ, ಮಹಾಂತೇಶ ಅಂಗಡಿ, ಶಿವಲೀಲಾ ಅಕ್ಕಿ, ಗೌರಕ್ಕ ಬಡಿಗಣ್ಣವರ, ಅಕ್ಕಮಹಾದೇವಿ ಚಟ್ಟಿ, ಮಂಜುಳಾ ಹಾಸಲಕರ, ಗಂಗಮ್ಮ ಹೂಗಾರ, ಸಹನಾ ಆಲತಗಿ, ಕಸ್ತೂರೆಮ್ಮ ಗೋಣಿ ಮುಂತಾದವರಿದ್ದರು.

## ಸಂಪಾದಕೀಯ

# ದಿಢೀರ್ ಪ್ರಚಾರದ ತಂತ್ರ

ಉತ್ತರ ಕನ್ನಡ ಸಂಸದ ಅನಂತಕುಮಾರ ಹೆಗಡೆ ಈಗ ಸುದ್ದಿಯಲ್ಲಿದ್ದಾರೆ. ಕಳೆದ ಲೋಕಸಭೆ ಚುನಾವಣೆ ನಂತರ ಬಹುತೇಕ ನಾಪತ್ತೆಯಾದಂತಿದ್ದ ಅನಂತಕುಮಾರ, ಕೆಲ ಕಾಲ ಅನಾರೋಗ್ಯಕ್ಕೆ ತುತ್ತಾಗಿದ್ದರು. 2024ರ ಲೋಕಸಭೆ ಚುನಾವಣೆಗೆ ಅವರು ಸ್ಪರ್ಧಿಸುವುದಿಲ್ಲ ಎನ್ನುವ ವದಂತಿ ತೀವ್ರಗೊಳ್ಳುತ್ತಿದ್ದಂತೆ ಏಕಾಏಕಿ ಅನಂತಕುಮಾರ ಹೆಗಡೆ ಪ್ರತ್ಯಕ್ಷರಾಗಿದ್ದಾರೆ.

ಹೀಗೆ ದಿಢೀರ್ ಪ್ರತ್ಯಕ್ಷಗೊಂಡ ಅನಂತಕುಮಾರ ಹೆಗಡೆ, ಅಷ್ಟೆ ದಿಢೀರ್ ಪ್ರಚಾರ ಗಿಟ್ಟಿಸಿಕೊಳ್ಳಲು ಮಾಡಿದ್ದು ಮುಖ್ಯಮಂತ್ರಿ ನಿಂದನೆ. ಅದರಲ್ಲೂ ಸಿದ್ದರಾಮಯ್ಯ ವಿರುದ್ಧ ಏಕವಚನ ಪ್ರಯೋಗ ಮಾಡುವ ಮೂಲಕ ಯಶಸ್ಸು ಕಂಡುಕೊಂಡಿದ್ದಾರೆ. ಆ ಮೂಲಕ ಕರಾವಳಿಯಲ್ಲಿ ಮತ್ತೊಮ್ಮೆ ಅನಂತಕುಮಾರ ಹೆಗಡೆ ಹವಾ ಶುರುವಾದಂತಾಗಿದೆ.

ಕೈಲಾಗದ ವಿರೋಧಿಯ ಕೊನೆಯ ಅಸ್ತ್ರವೇ ಅಪಪ್ರಚಾರ ಎನ್ನುವ ಮಾತು ಸಾಮಾಜಿಕ ಜಾಲತಾಣದಲ್ಲಿ ಇತ್ತೀಚಗೆ ಸಾಕಷ್ಟು ವೈರಲ್ ಆಗುತ್ತಿದೆ. ಸದ್ಯ ಅನಂತಕುಮಾರ ಹೆಗಡೆ ಮಾಡಿದ್ದು ಅದನ್ನೆ. ಸಕಾರಣವಿಲ್ಲದೆ, ಸಕ್ರಿಯ ರಾಜಕಾರಣದಲ್ಲಿಯೂ ಇಲ್ಲದೇ ಮುಖ್ಯಮಂತ್ರಿಯನ್ನು ಏಕವಚನದಲ್ಲಿ ನಿಂದಿಸುವುದು ಪ್ರಚಾರಕ್ಕೆ ಮಾಡಿದ ನಾಟಕ ಎನ್ನುವುದನ್ನು ಬಿಜೆಪಿ ಕಾರ್ಯಕರ್ತರೆ ಒಪ್ಪಿಕೊಳ್ಳುತ್ತಾರೆ.

ಆದರೆ ಅನಂತಕುಮಾರ ಹೆಗಡೆ ತಂತ್ರಗಾರಿಕೆ ಅರಿಯದ ಕಾಂಗ್ರೆಸ್ಸಿಗರು, ಅನಂತಕುಮಾರ ಹೆಗಡೆ ಮೇಲೆ ಮುಗಿಬಿದ್ದಿದ್ದಾರೆ. ಸಿದ್ದರಾಮಯ್ಯ ಅವರಿಗೆ ನೀಡಿದ್ದ ಬಹಿರಂಗ ಆಹ್ವಾನವನ್ನು ಆಡಳಿತ ಪಕ್ಷದ ಕೆಲ ಶಾಸಕರು ಸ್ವೀಕರಿಸಿ, ಚರ್ಚೆ ಮತ್ತಷ್ಟು ವಿಸ್ತಾರಗೊಳ್ಳಲು ಕಾರಣರಾಗಿದ್ದಾರೆ. ಅಲ್ಲಿಗೆ ಅನಂತಕುಮಾರ ಹೆಗಡೆ ಅವರ ತಂತ್ರಗಾರಿಕೆ ಮತ್ತಷ್ಟು ಫಲಿಸಿದಂತಾಗಿದೆ.

ಅನಂತಕುಮಾರ ಹೆಗಡೆ ತಮ್ಮ ಕೆಲಸಕ್ಕಿಂತ ಹೆಚ್ಚಾಗಿ ವಿವಾದ ಮತ್ತು ದ್ವೇಷ ಭಾಷಣಗಳಿಂದಲೇ ಹೆಚ್ಚು ಪ್ರಚಾರ ಪಡೆದು ಮತ ಗಳಿಸಿದವರ ಪೈಕಿ ಮುಂಚೂಣಿಯಲ್ಲಿದ್ದಾರೆ. ಅಂಥವರು ಸಿಎಂ ವಿರುದ್ಧ ಏಕ ವಚನ ಪ್ರಯೋಗ ಮಾಡಿದ್ದನ್ನು ಉದಾಸೀನ ಮಾಡಿ ಬಿಟ್ಟಿದ್ದರೆ ಇವತ್ತು ಹೆಗಡೆ ಹೆಸರು ಮುಂಚೂಣಿಗೆ ಬರುತ್ತಿರಲಿಲ್ಲ.

ಅನಂತಕುಮಾರ ಹೆಗಡೆ ರಾಜಕೀಯದಿಂದ ದೂರ ಹೋಗಿದ್ದಾರೆ ಎನ್ನುವ ಕಾರಣಕ್ಕೆ ಬಿಜೆಪಿಯೂ ಅವರನ್ನು ಮರೆತಿದ್ದರು. ಯಾವಾಗ ದಿಢೀರ್ ಪ್ರತ್ಯಕ್ಷರಾಗಿ ಸಿಎಂ ವಿರುದ್ಧ ನಿಂದನೆ ಅರಂಭಿಸಿದ್ದು ಬಿಜೆಪಿ ನಾಯಕರಿಗೂ ಬಿಸಿ ತುಪ್ಪವಾಗಿ ಪರಿಣಮಿಸಿದೆ. ಜಾತಿ ಆಧಾರಿತ ರಾಜ-ಕಾರಣ ನಡೆಯುತ್ತಿರುವ ಈ ಕಾಲದಲ್ಲಿ, ಸಿಎಂ ನಿಂದಿಸಿ ಹಾಲುಮತ ಸಮಾಜದ ಕಂಗೆಣ್ಣಿಗೆ ಗುರಿಯಾಗಿದ್ದಾರೆ. ಕೇವಲ ಕರಾವಳಿ ಕೇಂದ್ರಿತ ರಾಜಕಾರಣ ಮಾಡಿದ ಅನಂತಕುಮಾರ ಬಗ್ಗೆ ಸ್ವಪಕ್ಷದಲ್ಲೆ ಅಸಮಾಧಾನವಿದೆ. ಬಸನಗೌಡ ಪಾಟೀಲ ಯತ್ನಾಳ ರೀತಿ ಅನಂತಕುಮಾರ ಹೆಗಡೆ ಅವರನ್ನು ಬಿಸಿ ತುಪ್ಪ ಎಂದು ಅನುಭವಿಸಬೇಕಾಗಿದೆ.

### ಜನಸಾಮಾನ್ಯರ ಬಾಯಲ್ಲಿ ಸುಲಭವಾಗಿ ನಿಲ್ಲಬಲ್ಲ ಪದ್ಯಗಳನ್ನು ರಚಿಸಿದ ಮಹಾನ್ ಕವಿ

# ಸಂತೆಯಲ್ಲಿ ನಿಂತು ಸಂತರಾದ ಯೋಗಿ ವೇಮನರು

ಮಹಾತ್ಮ ಗಾಂಧೀಜಿಯ ವಿಶ್ವಶಾಂತಿ, ಬುದ್ಧನ ಕರುಣೆ, ಅಂಬೇಡ್ಕರರ ಸಮಾನತೆ, ಶಿಶುನಾಳ ಶರೀಫರ ಧಾರ್ಮಿಕ ಸೌಹಾರ್ದತೆ, ಬಸವಣ್ಣ-ಕುವೆಂಪುರವರ ವಿಶ್ವಮಾನವ ಸಂದೇಶ ಎಲ್ಲವನ್ನೂ ತಮ್ಮ ಸಾಹಿತ್ಯ ಹಾಗೂ ಜೀವನ ಸಂದೇಶದ ಮೂಲಕ ಇಂದಿಗೂ ಪ್ರಸ್ತುತರಿರುವ ಶ್ರೇಷ್ಠ ತತ್ವಜ್ಞಾನಿ, ಅನುಭಾವಿ, ಜನಸಾಮಾನ್ಯರ ಕವಿ ಮಹಾಯೋಗಿ ವೇಮನರು. ಇಂದು ಆ ಮಹಾನ್ ಯೋಗಿವರೇಣ್ಯರು ಧರೆಗವತರಿಸಿದ ಪವಿತ್ರ ದಿನ. ಈ ದಿನ ವೇಮನರ 612ನೇ ಜಯಂತಿಯನ್ನು ಅತ್ಯಂತ ಭಕ್ತಿ ಶ್ರದ್ಧೆಯಿಂದ ಆಚರಿಸಲಾಗುತ್ತಿದೆ.

ಆಂಧ್ರಪ್ರದೇಶದ ಗುಂಟೂರು ಜಿಲ್ಲೆಯ ಕೊಂಡವೀಡು ಗ್ರಾಮದಲ್ಲಿ ವೇಮನರು ಜನಿಸಿದರು. ಬಾಲ್ಯದಿಂದಲೂ ಸುಖದಲ್ಲಿ ಬೆಳೆದ ವೇಮನ ಕೊನೆಗಾಲದಲ್ಲಿ ಬೈರಾಗಿಯಾಗಿ ಅಲೆದಾಡುವವರೆಗಿನ ಪ್ರಯಾಣ ಒಂದು ಪ್ರೇರಣಾದಾಯಿ ಇತಿಹಾಸ.

ಬಂಗಾರವನ್ನು ತಯಾರಿಸುವ ವಿದ್ಯೆಯ ರಹಸ್ಯ ತಿಳಿಯಲು ಅಲೆದಾಟ ಪ್ರಾರಂಭಿಸಿದ ವೇಮನ ಗುರುವನ್ನು ಹುಡುಕುತ್ತ ಸಂಚಾರ ಪ್ರಾರಂಭಿಸಿದರು. ಅಣ್ಣ ಪಾಳ್ಳೇಪಟ್ಟಿನ ಆಡಳಿತ ನೋಡಿಕೊಳ್ಳುತ್ತಿದ್ದ. ಅರಮನೆಯ ಆಭರಣ, ಶಿಲ್ಪ ಕೆಲಸಗಳನ್ನು ನಡೆಸಿಕೊಡಲು ಒಂದು ಕಾರ್ಯಾಗಾರವಿತ್ತು. ಅದರಲ್ಲಿ ಕೆಲಸ ಮಾಡುತ್ತಿದ್ದವರಲ್ಲಿ ಅಭಿರಾಮಾಚಾರ್ಯನೂ ಒಬ್ಬ. ಚಿನ್ನದ ಕೆಲಸ ಮಾಡುವವ. ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಿದ್ದ. ತುಂಬಾ ಸಾತ್ವಿಕ. ನಯವಾದ ಮಾತು. ಆದರೆ ನಿತ್ಯವೂ ಕಾರ್ಯಾಗಾರಕ್ಕೆ ತಡವಾಗಿ ಬರುತ್ತಿದ್ದ.

ವೇಮನರು ಮನೆಗೆ ಹಿಂತಿರುಗಿದ ಮೇಲೆ ಅವನಿಗೆ ಒಂದು ಕೆಲಸ ಇರಬೇಕೆಂದು ಈ ಕಾರ್ಯಾಗಾರದ ಉಸ್ತುವಾರಿಗೆ ನಿಯಮಿಸಲ್ಪಟ್ಟರು. ಅಭಿರಾಮಾಚಾರ್ಯ ನಿತ್ಯವೂ ತಡವಾಗಿ ಬರುವುದನ್ನು ವೇಮನ ಗಮನಿಸಿದರು. ಎಚ್ಚರಿಸಿ, ಕೆಲಸದಿಂದ ತೆಗೆದುಹಾಕುವುದಾಗಿಯೂ ಬೆದರಿಸಬೇಕಾಯಿತು. ಅಭಿರಾಮಾಚಾರ್ಯ ಇನ್ನೂ ಬೇಗ ಕಾರ್ಯಾಗಾರಕ್ಕೆ ಬರಲು ಸಾಧ್ಯವಿಲ್ಲವೆಂದು ನಮ್ರನಾಗಿಯೇ ಬಿನ್ನವಿಸಿಕೊಂಡು ತಾನು ಸಂಜೆ ತಡವಾಗಿ ಹೋಗುತ್ತಿರುವುದನ್ನು ಹೇಳಿದ. ಈ ಒಂದು ಕೊರತೆ ಬಿಟ್ಟು ಆತನಲ್ಲಿ ಮತ್ತಾವ ತಪ್ಪೂ ಇರಲಿಲ್ಲ. ಜೀವನಾಧಾರವಾಗಿರುವ ಕೆಲಸಕ್ಕಿಂತಲೂ ಆತ ತಡವಾಗಿ ಬರುವ ಕಾರಣವೇ ಮುಖ್ಯವೇ! ವೇಮನನಿಗೆ ಇದು ಆಶ್ಚರ್ಯವಾಗಿ ತೋರಿತು.



ಈ ಒಗಟು ಎಷ್ಟು ಯೋಚಿಸಿದರೂ ಬಗೆಹರಿಯಲಿಲ್ಲ. ಅದಕ್ಕೆಂದೇ ಮರುದಿನ ಮುಂಜಾನೆಯ ವೇಳೆಗೆ ಅಭಿರಾಮಾಚಾರ್ಯನ ಮನೆಯ ಬಳಿಗೆ ಬಂದು ಅಡಗಿ ಕುಳಿತರು. ಅಭಿರಾಮಾಚಾರ್ಯ ನಸುಗತ್ತಲಲ್ಲೇ ಸ್ನಾನ-ಪೂಜೆ ಮುಗಿಸಿಕೊಂಡು ಮಡಿಯಲ್ಲೇ ಪೂಜಾ ಸಾಮ್ರಗ್ರಿ, ಹಣ್ಣು-ಹಂಪಲುಗಳನ್ನು ಎತ್ತಿಕೊಂಡು ಹೊರಟ. ಊರಿನ ಹೊರ ಭಾಗದಲ್ಲಿದ್ದ ಬೆಟ್ಟದ ಗುಹೆಯೊಂದರ ಒಳಕ್ಕೆ ಹೋದ. ಕುತೂಹಲದಿಂದ ಆತನ ಹಿಂದೆಯೇ ಹೋದರು ವೇಮನರು. ಗುಹೆಯಲ್ಲಿ ಒಬ್ಬ ಯತಿವರ್ಯ ತಪಸ್ಸು ಮಾಡುತ್ತಿದ್ದ. ಅವರ ಮುಂದೆ ಪೂಜಾ ದ್ರವ್ಯಗಳನ್ನು ಇರಿಸಿ ಕೈಮುಗಿದು ನಿಂತ. ಕಣ್ತೆರೆದ ಯತೀಂದ್ರ ಆಚಾರ್ಯನನ್ನು ಆಶೀರ್ವದಿಸಿ, 'ಮಗು, ಇಷ್ಟು ದಿನಗಳ ಸೇವೆಯಿಂದ ಸಂಪ್ರೀತರಾಗಿದ್ದೇವೆ. ನಾಳೆ ಸಮಾಧಿಯನ್ನು ಪ್ರವೇಶಿಸಲಿದ್ದೇವೆ. ಆದ್ದರಿಂದ ನಾಳೆ ಬೆಳಗಿನ ಜಾವ ಬಾ' ಎಂದು ಹೇಳಿದರು.

ವೇಮನರಿಗೆ ಇದೆಲ್ಲಾ ವಿಚಿತ್ರವೆನಿಸಿತು. ಕೇವಲ ಈ ಯತಿಯ ಉಪದೇಶಕ್ಕಾಗಿ ಅಭಿರಾಮಾಚಾರ್ಯ ತನ್ನ ಕುಟುಂಬ ನಿರ್ವಹಣೆ ನಡೆಸಲು ನೆರವಾಗುತ್ತಿದ್ದ ಅರಮನೆಯ ಕೆಲಸವನ್ನು ಕ್ಷುಲ್ಲಕ ಎಂದು ಭಾವಿಸಿದನೇ? ಅದೇನು ಉಪದೇಶವೋ ಕೇಳಲೇಬೇಕೆಂದು ವೇಮನರು ತೀರ್ಮಾನಿಸಿದರು. ಅಭಿರಾಮಾಚಾರ್ಯನನ್ನು ಅರಮನೆಯಲ್ಲಿಯೇ ಇರಿಸಿ, ಆತನ ಬದಲಾಗಿ ವೇಮನ ಗುಹೆಗೆ ಹೊರಟರು. ಯತೀಂದ್ರ

> ಯೋಗಿಯಾದ ನಂತರ ವೇಮನ ಮನೆ ಬಿಟ್ಟರು. ಬೈರಾಗಿಯಾಗಿ ಸುತ್ತಾಡಿದ. ಜನಸಾಮಾನ್ಯರ ಬಾಯಲ್ಲಿ ಸುಲಭವಾಗಿ ನಿಲ್ಲಬಲ್ಲ ಪದ್ಯಗಳನ್ನು ರಚಿಸಿ ಅನೇಕ ಸತ್ಯಗಳನ್ನು ಅದರಲ್ಲಿ ಅಡಗಿಸಿದರು. ವೇಮನರ ಬದುಕು ಮತ್ತು ವಚನಗಳ ಬಗ್ಗೆ ಸಂಶೋಧನೆ ನಡೆಸಿದ ಸಿ.ಪಿ. ಬ್ರೌನ್ ಅವರು 19ನೇ ಶತಮಾನದಲ್ಲಿ ವೇಮನರ ವಚನಗಳನಗಳನ್ನು ಪ್ರಕಟಿಸಿದರು.

ಕಣ್ತೆರೆದ. ಹೊಸ ವ್ಯಕ್ತಿಯನ್ನು ಗಮನಿಸಿ ಅಭಿರಾಮಾಚಾರ್ಯನಿಗಾಗಿ ಕೇಳಿದ. ಅರಮನೆಯಲ್ಲಿ ತುಂಬಾ ಜರೂರಾದ ಕೆಲಸವಿದ್ದುದರಿಂದ ಶಿಷ್ಯನಾದ ತನ್ನನ್ನು ಕಳುಹಿಸಿರುವುದಾಗಿ ಮನವಿ ಮಾಡಿಕೊಂಡ.

ಯತೀಂದ್ರನಿಗೆ ಆಶ್ಚರ್ಯವಾಯಿತು. ತ್ರಿಕಾಲ ಜ್ಞಾನಿಯಾದ ಆತ ನಿಜಸಂಗತಿ ಗ್ರಹಿಸಿದ. ವೇಮನರೂ ಅವತಾರ ಪುರುಷನೆಂಬುದನ್ನು ಗುರುತಿಸಿದ. ಉಪದೇಶ ನೀಡಿದನಾದರೂ ಕೊನೆಗೆ ಒಂದು ಕಟ್ಟಳೆ ಹಾಕಿದ. ಈ ಉಪದೇಶ ಸಿದ್ಧಿಸಬೇಕಾದರೆ ಇದನ್ನೆಲ್ಲಾ ಅಭಿರಾಮಾಚಾರ್ಯನಿಗೆ ಹೇಳಿ ಆತನಿಂದ ಮತ್ತೆ ಉಪದೇಶ ಪಡೆಯಬೇಕು!

ನೇರವಾಗಿ ಅಭಿರಾಮಾಚಾರ್ಯನ ಬಳಿಗೆ ಬಂದು ಆತನ ಪಾದಗಳನ್ನು ಹಿಡಿದರು. ಅಭಿರಾಮಾಚಾರ್ಯನಿಗೆ ಆಶ್ಚರ್ಯವಾಯಿತು. ವೇಮನರು ನಡೆದುದೆಲ್ಲವನ್ನೂ ಹೇಳಿದರು. ಯೋಗೀಂದ್ರರ ಆಜ್ಞೆಯನ್ನು ತಿಳಿಸಿದರು. ಅಭಿರಾಮಾಚಾರ್ಯನ ಕಣ್ಣಲ್ಲಿ ನೀರು ಉಕ್ಕಿತು. ಕಂಠ ಕಟ್ಟಿತು, ಈ ರೀತಿಯಲ್ಲಾದರೂ ತನ್ನ ಬಾಳಿನ ಬಯಕೆ ಸಂದಿತಲ್ಲಾ ಎಂದು. ವೇಮನರಿಗೆ ಗುರೂಪದೇಶವೂ ನಡೆಯಿತು. ಹೀಗೆ ಇಬ್ಬರೂ ಪುನೀತರಾದರು.

ಇತಿಹಾಸಕಾರರ ಪ್ರಕಾರ 1480ರಲ್ಲಿ ಆ ಮಹಾಚೇತನ ಚೈತನ್ಯಮಯಿಯಾಯ್ತು. ಆಂಧ್ರಪ್ರದೇಶದ ಕಡಪಾ ಜಿಲ್ಲೆಯ ಕದಿರು ತಾಲ್ಲೂಕಿನ ಕಟಾರುಪಳ್ಳಿಯಲ್ಲಿ ಅವರ ಸಮಾಧಿ ಇದ್ದು ಪ್ರತಿವರ್ಷ ಜಾತ್ರೆ ನಡೆಯುತ್ತ ಬಂದಿದೆ.



**– ಈಶ್ವರ ಎಸ್.ಮೆಡ್ಲೇರಿ.**
ಅಧ್ಯಕ್ಷರು, ಕಸಾಪ- ಲಕ್ಷ್ಮೇಶ್ವರ.




■ವಿಜಯಸಾಕ್ಷಿ ಸುದ್ದಿ, ಶಿವಮೊಗ್ಗ

ಕರ್ನಾಟಕ ಪಾರಂಪರಿಕ ವೈದ್ಯ ಪರಿಷತ್ ಶಿವಮೊಗ್ಗ ವತಿಯಿಂದ ಸಾಂಕ್ರಾಮಿಕ ರೋಗಗಳು ಹಾಗೂ ಕೊರೋನ ವೈರಸ್ ಬರದಂತೆ ತಡೆಗಟ್ಟಲು ರೋಗನಿರೋಧಕ ಶಕ್ತಿ ಹೆಚ್ಚಿಸುವ 108 ಗಿಡಮೂಲಿಕೆಗಳಿಂದ ತಯಾರಿಸಿದ ಕಷಾಯವನ್ನು ಜ.17ರಂದು ಟಿಎಸ್‌ಡಬ್ಲ್ಯೂ ಕಾಲೋನಿ ಗಣಪತಿ ಪೆಂಡಾಲ್ ಆವರಣದಲ್ಲಿ ಪರಿಷತ್ ರಾಜ್ಯಾಧ್ಯಕ್ಷ ರಾಜು ಪಂಡಿತ್ ನೇತೃತ್ವದಲ್ಲಿ ಸಾರ್ವಜನಿಕರಿಗೆ ಉಚಿತವಾಗಿ ವಿತರಿಸಲಾಯಿತು.

# ಶಿಕ್ಷಕರು ಸದಾ ಅಧ್ಯಯನಶೀಲರಾಗಿ



■ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಶಹರ ಘಟಕದ ವತಿಯಿಂದ ನಗರದಲ್ಲಿ ಸಾವಿತ್ರಿಬಾಯಿ ಪುಲೆ ಜಯಂತಿ ಅಂಗವಾಗಿ ಶೈಕ್ಷಣಿಕ ಕಾರ್ಯಾಗಾರ ಹಾಗೂ ಆದರ್ಶ ಶಿಕ್ಷಕರಿಗೆ ಸನ್ಮಾನ ಕಾರ್ಯಕ್ರಮ ಜರುಗಿತು.

ಕಾರ್ಯಕ್ರಮ ಉದ್ಘಾಟಿಸಿದ ವಿ.ಪ ಸದಸ್ಯ ಎಸ್.ವ್ಹಿ. ಸಂಕನೂರ ಮಾತನಾಡಿ, ಶಿಕ್ಷಕ ವೃತ್ತಿ ಪವಿತ್ರವಾದ ವೃತ್ತಿಯಾಗಿದ್ದು, ಮಕ್ಕಳ ಭವಿಷ್ಯವನ್ನು ನಿರ್ಮಿಸುವ ಸಂಪೂರ್ಣ ಜವಾಬ್ದಾರಿ ಶಿಕ್ಷಕರದ್ದಾಗಿರುತ್ತದೆ. ಕಾರಣ ಶಿಕ್ಷಕರು ಸದಾ ಅಧ್ಯಯನಶೀಲರಾಗಿ, ಮಕ್ಕಳ ಭವಿಷ್ಯ ನಿರ್ಮಿಸುವಲ್ಲಿ ಮುಂದಾಗಬೇಕೆಂದು ಕರೆ ನೀಡಿದರು.

ಗದಗ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ಮಾತನಾಡಿ, ಭವ್ಯ ಭಾರತವನ್ನು ನಿರ್ಮಿಸುವ ಕಾರ್ಯ ಶಿಕ್ಷಕರದ್ದಾಗಿದೆ. ಉತ್ತಮ ಸೇವೆಯ ಮೂಲಕ ತಮ್ಮ ವೃತ್ತಿಗೆ ನ್ಯಾಯ ಒದಗಿಸಬೇಕೆಂದರು. ಎಐಪಿಟಿಎಸ್ ರಾಷ್ಟ್ರೀಯ ಉಪಾಧ್ಯಕ್ಷ ಬಸವರಾಜ ಗುರಿಕಾರ, ಗದಗ ಶಹರ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಎಸ್. ಬುರಡಿ ಮಾತನಾಡಿದರು. ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದ ಸರ್ವರನ್ನು ಸಂಘದ ಅಧ್ಯಕ್ಷ ಎಸ್.ಕೆ. ಮಂಗಳಗುಡ್ಡ ಸ್ಮರಿಸಿದರು. ಕಾರ್ಯಕ್ರಮದಲ್ಲಿ ವಲಯದ ಹತ್ತು ಆದರ್ಶ ಶಿಕ್ಷಕರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಎಸ್.ಎನ್. ಬಳ್ಳಾರಿ, ಡಿ.ಎಸ್. ತಳವಾರ, ವ್ಹಿ.ವ್ಹಿ. ನಡುವಿನಮನಿ, ವ್ಹಿ.ಎಂ. ಹಿರೇಮಠ, ಹೆಚ್.ಎಸ್. ಜಿನಗಿ, ಎಸ್.ಬಿ. ಕನವಳ್ಳಿ, ಕೆ.ಬಿ. ಕೊಣ್ಣೂರ, ಮಹೇಶ ಕುರಿ, ಎಚ್.ಎ. ಫಾರೂಕಿ, ಕೊಟ್ರೇಶ ವಿಭೂತಿ, ಶರಣಪ್ಪ ನಾಗರಳ್ಳಿ, ರವಿ ಕೋಟಿ, ಪಿ.ಎಲ್. ದೊಡ್ಡಮನಿ, ಎಂ.ಕೆ. ಹುಯಿಲಗೋಳ, ವಾಯ್.ಎಂ. ಕಟ್ಟಿ, ಈಶ್ವರ ಕಟ್ಟಿಮನಿ, ಮಹಾಲಕ್ಷ್ಮೀ ತೊಂಡಿಹಾಳ, ಎಂ.ಪಿ. ಮೆಣಸಿನಕಾಯಿ, ಆರ್.ಬಿ. ಸಂಕಣ್ಣವರ, ಸುರೇಶ ಕೊಪ್ಪದ, ಪಿ.ಆರ್. ನಿಡಗುಂದಿ, ಸಲ್ಮಾ ಬೆಳಗಾಂವಾಲೆ ಮುಂತಾದವರಿದ್ದರು.

ಸಂಘದ ಕಾರ್ಯದರ್ಶಿ ಪ್ರಶಾಂತ ಕನಾಜ ಸ್ವಾಗತಿಸಿದರು. ಸುಮಾ ಹಚಡದ ಕಾರ್ಯಕ್ರಮ ನಿರೂಪಿಸಿದರು. ರಶೀದ ವಂದಿಸಿದರು.




■ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಧಾರವಾಡ ಜಿಲ್ಲಾ ಘಟಕ ರೂಪಿಸಿರುವ 2024ನೇ ಸಾಲಿನ ದಿನದರ್ಶಿಕೆಯನ್ನು ಗುರುವಾರ ಬೆಳಿಗ್ಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪ್ರಭಾರ ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ., ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ., ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ. ಸಂಗಪ್ಪ ಗಾಬಿ ಮತ್ತು ಜಿಲ್ಲಾಧ್ಯಕ್ಷ ಎಸ್.ಎಫ್. ಸಿದ್ಧನಗೌಡರ ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ನೌಕರ ಸಂಘದ ಜಿಲ್ಲಾ ಪದಾಧಿಕಾರಿಗಳು, ವಿವಿಧ ಇಲಾಖೆಯ ಅಧಿಕಾರಿ-ಸಿಬ್ಬಂದಿಗಳು ಉಪಸ್ಥಿತರಿದ್ದರು.

### ಜನವರಿ 19, ಮಹಾಯೋಗಿ ವೇಮನ ಜಯಂತಿಯ ಪ್ರಯುಕ್ತ ಲೇಖನ


# ಬದುಕಿನ ವಾಸ್ತವಿಕತೆ ಪರಿಚಯಿಸಿದ ಮಹಾಯೋಗಿ

ಮನುಕುಲದ ಏಳಿಗೆಗೆ ಶ್ರಮಿಸಿದವರು ಹಲವಾರು ಮಹನೀಯರು, ಬದುಕಿನ ಸಾರ-ಸತ್ವವನ್ನು ಅರಿತುಕೊಂಡು ಮುಂಬರುವ ಪೀಳಿಗೆಗೆ ಅನುಭವದ ಅಮೃತವನ್ನು ನೀಡುವ ಮೂಲಕ ಬದುಕಿನ ವಾಸ್ತವಿಕತೆ ಮೇಲೆ ಬೆಳಕು ಚೆಲ್ಲಿದ ಶರಣರು ಸಮಾಜ ಸುಧಾರಕರಾಗಿದ್ದಾರೆ. ಒಂದು ದಿನ ಮುಗಿದುಹೋಗುವ ಈ ಜೀವನದ ಪಯಣದಲ್ಲಿ ಕಷ್ಟ-ಸುಖ, ನೋವು-ನಲಿವುಗಳ ಅದೆಷ್ಟೋ ಏರಿಳಿತಗಳನ್ನು ಅನುಭವಿಸಿದ ಮಹನೀಯರು ತಾವು ಕಂಡುಂಡ ಅನುಭವಗಳನ್ನು ಆಧರಿಸಿ ಸಮಾಜಕ್ಕೊಂದು ಮೌಲ್ಯಯುತ ಸಂದೇಶವನ್ನು ಸಾರಿ ಹೋಗಿದ್ದಾರೆ. ಅಂತಹ ಮಹನೀಯರ ಸಾಲಿನಲ್ಲಿ ನಿಲ್ಲುವ ವೇಮನರು ತುಂಬು ವಿಶೇಷವೆನಿಸುತ್ತಾರೆ.

15ನೇ ಶತಮಾನದಲ್ಲಿ ತೆಲುಗು ನಾಡಿಟ ಶ್ರೇಷ್ಠ ಸಂತರಾಗಿ, ಕವಿಗಳಾಗಿ, ಪರಮಜ್ಞಾನಿಗಳಾಗಿ ಮಹಾಕವಿ ವೇಮನರು ಮಾನವನ ಅಜ್ಞಾನ, ಅಂಧಕಾರ, ಲೌಕಿಕ ಬದುಕಿನ ಆಸೆ-ಆಮಿಷಗಳು, ಅತಿರೇಕದ ಹಿತಮಿತವಿಲ್ಲದ ವರ್ತನೆಗಳು ವ್ಯಕ್ತಿಗೆ ಹಾಗೂ ಸಮಾಜಕ್ಕೆ ಮಾರಕವಾಗಬಲ್ಲವು ಎನ್ನುವ ಅಂಶವನ್ನು ಭಾರತೀಯ ಋಷಿಪರಂಪರೆಯ ವ್ಯಕ್ತ ರೂಪವಾಗಿ ದರ್ಶನವನ್ನು ತೋರಿದ್ದಾರೆ.

ಅತ್ತಿಗೆ ಹೇಮರೆಡ್ಡಿ ಮಲ್ಲಮ್ಮನವರ ಆಶ್ರಯದಲ್ಲಿ ಮಗನಂತೆ ಬೆಳದು, ಹೆತ್ತ ತಾಯಿಯಂತೆ ಮಮತೆ ಪ್ರೀತಿ ವಾತ್ಸಲ್ಯ ತೋರಿದ ಹೇಮರೆಡ್ಡಿ ಮಲ್ಲಮ್ಮ ಲೌಕಿಕ ತುಮುಲಗಳಿಗೆ ಅಂಟಿಕೊಂಡಿದ್ದ ವೇಮನನಿಗೆ ತಾಯಿಯಾಗಿ, ಆಧ್ಯಾತ್ಮ ಗುರುವಾಗಿ, ಮಾರ್ಗ ತೆ-ೂರಿದರು. ಇಂತಹ ಮಹಾಸಾಧ್ವಿಯನ್ನು ಅತ್ತಿಗೆಯನ್ನಾಗಿ ಪಡೆದ ವೇಮನರ ಬದುಕಿನಲ್ಲಿ ಮಹಾ ಯೋಗಿಯಾಗುವ ಸಾಕ್ಷಾತ್ಕಾರದ ಹಾದಿಗೆ ಮೂಲ ಪ್ರೇರಣೆಯಾದರು.

ಇಡೀ ರೆಡ್ಡಿ ಕುಲದ ಆರಾಧ್ಯ ದೈವವಾಗಿ ಹೇಮರೆಡ್ಡಿ ಮಲ್ಲಮ್ಮ ಹಾಗೂ ಮಹಾಯೋಗಿ ವೇಮನರು ತಮ್ಮ




ಬದುಕಿನ ದರ್ಶನದಿಂದ ಇಡೀ ಮಾನವ ಕುಲ ಕೋಟಿಗೆ ಮನುಷ್ಯ ಜೀವನದ ಆದರ್ಶಗಳನ್ನು, ತತ್ವ-ಸಂದೇಶಗಳನ್ನು ವಾಸ್ತವ ಸಂಗತಿಗಳನ್ನು ತಿಳಿಯಪಡಿಸಿದ್ದಾರೆ.

ಮಹಾಯೋಗಿ ವೇಮನರ ಸಾಹಿತ್ಯವನ್ನು ಅವಲೋಕಿಸಿದಾಗ ಅವರು ಏಕಾಂತದಲ್ಲಿರುವಾಗ, ಧ್ಯಾನಿಸುವಾಗ ಸಮಾಜದ ಆಗುಹೋಗುಗಳನ್ನು ಗಮನಿಸುವಾಗ ಅವರೊಳಗಿನ ಆತ್ಮ ಚೈತನ್ಯದ ವಿಚಾರಗಳು ವೇಮನರ ಪದ್ಯಗಳಾದವು.

ಅವರ ಶಿಷ್ಯವರ್ಗ ಅವುಗಳನ್ನು ಕೇಳಿ ಬರೆದುಕೊಂಡು, ನಿರಂತರವಾಗಿ ಪಠಣ ಮಾಡುತ್ತಿದ್ದರು. ಅವರ ಸಾಹಿತ್ಯ ಸರಿಯಾದ ರೀತಿಯಲ್ಲಿ ದಾಖಲಾಗಲಿಲ್ಲ, ನಂತರ ಕೆಲವು ತಾಳೆಗರಿಯ ಮೇಲೆ ಬರೆಯಲ್ಪಟ್ಟವು.

ಬ್ರಿಟಿಷ್ ಅಧಿಕಾರಿ ಅವುಗಳನ್ನು ಗ್ರಂಥರೂಪದಲ್ಲಿ ಪ್ರಕಟಿಸುವ ಕಾರ್ಯ ಪ್ರಾರಂಭಿಸಿದರು. ನಂತರ, ವೇಮನರ ಸಾಹಿತ್ಯದ ಕೆಲವು ಪದ್ಯಗಳು 20ನೇ ಶತಮಾನದಲ್ಲಿ ಕನ್ನಡ ಭಾಷೆಗೆ ತರ್ಜುಮೆಯಾದವು. ನಂತರದಲ್ಲಿ ಹಲವು ಮಹನೀಯರು ಸಂಗ್ರಹಿಸಿ, ಅನಂತರ ಡಾ. ಫ.ಗು ಹಳಕಟ್ಟಿಯವರು ಕೆಲವು ಮಹತ್ವದ ವೇಮನರ ಪದ್ಯಗಳನ್ನು ಆಯ್ದುಕೊಂಡು 'ವೇಮಣ್ಣ ಯೋಗಿಯ ವಚನಗಳು' ಎಂಬ ಗ್ರಂಥವನ್ನು ಪ್ರಕಟಿಸಿದರು. ಮಹಾಯೋಗಿ ವೇಮನರ ತತ್ವ-ಸಿದ್ಧಾಂತಗಳು ಇಡೀ ಮಾನವ ಕಲ್ಯಾಣಕ್ಕೆ ಪೂರಕವಾದವು. ಸರ್ವಜನ ಸಮುದಾಯಕ್ಕೆ ತಲುಪುವಂತಾಗಲು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ 'ಮಹಾಯೋಗಿ ವೇಮನ ಪೀಠ'ವನ್ನು ಸ್ಥಾಪಿಸಲಾಯಿತು. ಹೀಗೆ ವೇಮನರ ವಿಚಾರಗಳು ಲೌಕಿಕ ಜೀವನದ ನಶ್ವರತೆಯನ್ನು ತಿಳಿಸುತ್ತಾ, ಅಲೌಕಿಕ ಮಾರ್ಗದ ಸಾರ್ಥಕ ಹಾದಿಯನ್ನು ತೋರುತ್ತ, ಶರಣರ ತತ್ವ-ಚಿಂತನೆ ಪರಂಪರೆಯನ್ನು ಮಹಾಯೋಗಿ ವೇಮನರ ಕಾವ್ಯ ಸೃಷ್ಟಿಯಲ್ಲಿ ಕಾಣಬಹುದು. ಆಸೆ-ಆಮಿಷಗಳಿಗೆ ಒಳಪಟ್ಟು ಭೋಗಿಯಾದ ವೇಮನರು ಮಹಾ ಯೋಗಿಯಾಗಿ ತ್ಯಾಗಜೀವನದ ಸಾರ್ಥಕತೆಯೊಂದಿಗೆ ಮನುಕುಲದ ಉದ್ಧಾರಕ್ಕೆ ಮಾನವೀಯ ವಾಸ್ತವಿಕ ಸಂದೇಶಗಳನ್ನು ಸಾರಿದ ಮಹನೀಯರಾಗಿದ್ದಾರೆ.



**– ಪ್ರೊ. ಸುಧಾ ಹುಚ್ಚಣ್ಣವರ.**
ಉಪನ್ಯಾಸಕರು, ಲೇಖಕರು.

# ಜ.21ರಂದು ನಿಜಶರಣ ಅಂಬಿಗರ ಚೌಡಯ್ಯ ಜಯಂತಿ

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಹಯೋಗದಲ್ಲಿ ಜನವರಿ 21ರಂದು ಬೆ.11 ಗಂಟೆಗೆ ನಗರದ ಸಂಭಾಪೂರ ರಸ್ತೆಯಲ್ಲಿನ ಹವಾಮಾನ ಇಲಾಖೆ ಪಕ್ಕದಲ್ಲಿ ನಿಜಶರಣ ಅಂಬಿಗರ ಚೌಡಯ್ಯ ಜಯಂತಿ ಜರುಗಲಿದೆ.

ಕಾರ್ಯಕ್ರಮದ ದಿವ್ಯಸಾನಿಧ್ಯವನ್ನು ನರಸೀಪುರ ನಿಜಶರಣ ಅಂಬಿಗರ ಚೌಡಯ್ಯನವರ ಗುರುಪೀಠದ ಶಾಂತಭೀಷ್ಮ ಚೌಡಯ್ಯ ಮಹಾಸ್ವಾಮಿಗಳು ಹಾಗೂ ಮುಕ್ಕಣ್ಣೇಶ್ವರ ಮಠದ ಶಂಕರಾನಂದ ಸ್ವಾಮಿಗಳು ವಹಿಸಲ್ಲಿದ್ದಾರೆ.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಕಾರ್ಯಕ್ರಮದ ಘನ ಉಪಸ್ಥಿತಿ ವಹಿಸಲಿದ್ದಾರೆ.

ರಾಜ್ಯ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸರ್ಕಾರಿ ಮುಖ್ಯ ಸಚೇತಕರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಸಲೀಂ ಅಹ್ಮದ್ , ಸಂಸದರುಗಳಾದ ಶಿವಕುಮಾರ ಉದಾಸಿ, ಪಿ.ಸಿ.ಗದ್ದಿಗೌಡರ, ವಿಧಾನಪರಿಷತ್ ಸದಸ್ಯರುಗಳಾದ ಎಸ್.ವಿ. ಸಂಕನೂರ, ಪ್ರದೀಪ ಶೆಟ್ಟರ್, ನರಗುಂದ ಶಾಸಕರಾದ ಸಿ.ಸಿ.ಪಾಟೀಲ, ರೋಣ ಶಾಸಕ ಜಿ.ಎಸ್.ಪಾಟೀಲ, ಶಿರಹಟ್ಟಿ ಶಾಸಕ ಡಾ.ಚಂದ್ರು ಲಮಾಣಿ, ಗದಗ ಬೆಟಗೇರಿ ನಗರಸಭೆ ಅಧ್ಯಕ್ಷೆ ಉಷಾ ದಾಸರ, ನಗರಸಭೆ ಉಪಾಧ್ಯಕ್ಷೆ ಸುನಂದಾ ಬಾಕಳೆ ಆಗಮಿಸುವರು.

ಸರಕಾರಿ ಪ್ರೌಢಶಾಲೆಯ ಮುಖ್ಯೋಪಾಧ್ಯಯರಾದ ಶಿವಾನಂದ ಹೆಚ್.ಪರಸಣ್ಣವರ ಅವರು ಶ್ರೀ ನಿಜಶರಣ ಅಂಬಿಗರ ಚೌಡಯ್ಯನವರ ಜೀವನ ಮತ್ತು ಸಂದೇಶ ಕುರಿತು ಉಪನ್ಯಾಸ ನೀಡಲಿದ್ದಾರೆ. ಪಂ ವೆಂಕಟೇಶ ಅಲ್ಕೋಡ್ ಮತ್ತು ತಂಡದವರು ವಚನ ಗಾಯನ ಪ್ರಸ್ತುತಪಡಿಸುವರು.

ವಾಣಿಜ್ಯ ತೆರಿಗೆ ಆಯುಕ್ತರು ಹಾಗೂ ಗದಗ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಸಿ.ಶಿಖಾ, ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್.ನೇಮಗೌಡ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ವೀರಯ್ಯಸ್ವಾಮಿ.ಬಿ. ಸ್ವಾಗತ ಕೋರಿದ್ದಾರೆ.

# ಉಚಿತ ವಿದ್ಯುತ್: ವಾರ್ಷಿಕ ಸರಾಸರಿ ಮೇಲೆ ಶೇ.10ರಷ್ಟು ಬದಲು 10 ಯುನಿಟ್ ನೀಡಲು ಸಂಪುಟ ತೀರ್ಮಾನ

■ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಉಚಿತ ವಿದ್ಯುತ್ ಯೋಜನೆ ಗೃಹಜ್ಯೋತಿ ನಿಯಮದಲ್ಲಿ ರಾಜ್ಯ ಸರ್ಕಾರ ಮಹತ್ವದ ಬದಲಾವಣೆ ಮಾಡಿದ್ದು, ವಾರ್ಷಿಕ ಸರಾಸರಿ ಬಳಕೆಯ ಮೇಲೆ ಹೆಚ್ಚುವರಿ ಶೇ.10 ರಷ್ಟು ಉಚಿತ ವಿದ್ಯುತ್ ನೀಡುವ ಮಾನದಂಡವನ್ನು 10 ಯೂನಿಟ್ ಗೆ ಬದಲಾಯಿಸಲು ಸಚಿವ ಸಂಪುಟ ಒಪ್ಪಿಗೆ ನೀಡಿದೆ.

ಇಂದು ವಿಧಾನಸೌಧದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯ ಬಳಿಕ ಸಂಪುಟ ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವ ಕೆ.ಜೆ.ಜಾರ್ಜ್ ಅವರು, ಗೃಹಜ್ಯೋತಿ ಯೋಜನೆಯಡಿ 200 ಯೂನಿಟ್ ವಿದ್ಯುತ್ ಉಚಿತ ಅಂತಾ ಹೇಳಿದ್ವಿ. ಇದರನ್ವಯ ವಾರ್ಷಿಕ ಸರಾಸರಿ ಮೇಲೆ ಶೇ. 10 ರಷ್ಟು ವಿದ್ಯುತ್ ಹೆಚ್ಚು ಬಳಕೆ ಮಾಡಲು ಗ್ರಾಹಕರಿಗೆ ಅವಕಾಶ ನೀಡಲಾಗಿತ್ತು. ಕೇವಲ 20, 30, 40 ಯೂನಿಟ್ ಬಳಕೆ ಮಾಡುವ ಗ್ರಾಹಕರಿಗೆ ಶೇ 10 ರಷ್ಟು ಹೆಚ್ಚುವರಿ ಯೂನಿಟ್ ಅಂದರೆ ಕಡಿಮೆ ವಿದ್ಯುತ್ ಸಿಗುತ್ತಿದೆ. ಹೀಗಾಗಿ 48 ಯೂನಿಟ್ ಒಳಗೆ ಉಪಯೋಗ ಮಾಡುವ ಗ್ರಾಹಕರಿಗೆ ಶೇ. 10 ರಷ್ಟು ವಿದ್ಯುತ್ ಬದಲಾಗಿ 10 ಯೂನಿಟ್ ಹೆಚ್ಚುವರಿ ನೀಡಲು ಕ್ಯಾಬಿನೆಟ್ ಒಪ್ಪಿಗೆ ನೀಡಿದೆ ಎಂದರು.



ಮುಂದಿನ ತಿಂಗಳ ಬಿಲ್‌ನಿಂದಲೇ ಇದನ್ನು ಜಾರಿ ಮಾಡುತ್ತೇವೆ. ಇದರಿಂದ ರಾಜ್ಯ ಸರ್ಕಾರಕ್ಕೆ ವಾರ್ಷಿಕ 500 ಕೋಟಿ ರೂಪಾಯಿ ಹೆಚ್ಚುವರಿ ಹಣ ಖರ್ಚಾಗಲಿದೆ ಎಂದು ಸಚಿವರು ತಿಳಿಸಿದ್ದಾರೆ.

ಇನ್ನು ಕರ್ನಾಟಕ ವಿದ್ಯುತ್ ನಿಗಮ ಪಡೆದಿದ್ದ 4450 ಕೋಟಿ ರೂಪಾಯಿ ಸಾಲಕ್ಕೆ ಸರ್ಕಾರಿ ಖಾತರಿ ನೀಡಲು ಸಂಪುಟ ನಿರ್ಧರಿಸಿದೆ. ಹಲವು ವರ್ಷಗಳಿಂದ ಪಡೆದಿದ್ದ ಸಾಲಕ್ಕೆ ಒಳಹರಿವಿನ ಕೊರತೆಯಿದೆ. ಶ್ಯೂರಿಟಿ ನೀಡಬೇಕೆಂದು ಸರ್ಕಾರಕ್ಕೆ ವಿದ್ಯುತ್ ನಿಗಮ ಮನವಿ ಮಾಡಿತ್ತು. ಹೀಗಾಗಿ ಸರ್ಕಾರ ಇದೀಗ 4450 ಕೋಟಿ ರೂ. ಸಾಲಕ್ಕೆ ಖಾತರಿ ನೀಡಲು ತೀರ್ಮಾನಿಸಿದೆ ಎಂದು ಕೆ.ಜೆ.ಜಾರ್ಜ್ ಹೇಳಿದ್ದಾರೆ.

### ವಾಣಿಜ್ಯ ತೆರಿಗೆ ಪರಿವೀಕ್ಷಕರ ಹುದ್ದೆಗೆ ಸ್ಪರ್ಧಾತ್ಮಕ ಪರೀಕ್ಷೆ

# ಸುಗಮ, ವ್ಯವಸ್ಥಿತವಾಗಿ ಪರೀಕ್ಷೆಗಳನ್ನು ಜರುಗಿಸಲು ಸೂಚನೆ

■ ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ಲೋಕಸೇವಾ ಆಯೋಗವು ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಉಳಿಕೆ ಮೂಲ ವೃಂದದ ವಾಣಿಜ್ಯ ತೆರಿಗೆ ಪರಿವೀಕ್ಷಕರ ಹುದ್ದೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳು ಜ.20 ಹಾಗೂ 21 ರಂದು ಜರುಗಲಿವೆ. ಜಿಲ್ಲಾ ಕೇಂದ್ರದಲ್ಲಿ ಜರುಗಲಿರುವ ಪರೀಕ್ಷೆಗಳನ್ನು ಯಾವುದೇ ದೊಷಾರೋಪಣೆಗಳಿಗೆ ಆಸ್ಪದ ನೀಡದೆ ಸುಗಮವಾಗಿ ಜರುಗಿಸುವಂತೆ ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ ಎಂ. ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಗುರುವಾರ ಜರುಗಿದ ವಾಣಿಜ್ಯ ತೆರಿಗೆ ಪರಿವೀಕ್ಷಕರ ಹುದ್ದೆ ಸ್ಪರ್ಧಾತ್ಮಕ ಪರೀಕ್ಷೆಗಳ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.




ಜ. 20 ಹಾಗೂ 21 ರಂದು ವಾಣಿಜ್ಯ ತೆರಿಗೆ ಪರಿವೀಕ್ಷಕರ ಹುದ್ದೆಗೆ ಕಡ್ಡಾಯ ಕನ್ನಡ ಭಾಷಾ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳು ಅವಳಿ ನಗರದ ಒಟ್ಟು 8 ಪರೀಕ್ಷಾ ಕೇಂದ್ರಗಳಲ್ಲಿ ಜರುಗಲಿವೆ. ಅವಳಿ ನಗರದಲ್ಲಿ ಜರುಗಲಿರುವ ಸ್ಪರ್ಧಾತ್ಮಕ ಪರೀಕ್ಷೆಗಳು ಸುಗಮ ಹಾಗೂ ವ್ಯವಸ್ಥಿತವಾಗಿ ಜರುಗಿಸಲು ಈಗಾಗಲೇ ವಿವಿಧ ಸಮಿತಿಗಳನ್ನು ರಚಿಸಲಾಗಿದ್ದು, ಪರೀಕ್ಷೆಗೆ ನಿಯೋಜಿತ ಅಧಿಕಾರಿ, ಸಿಬ್ಬಂದಿಗಳು ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸುವಂತೆ ತಿಳಿಸಿದರು.

ಕರ್ನಾಟಕ ಲೋಕಸೇವಾ ಆಯೋಗದ ಪರೀಕ್ಷೆ ಮಾರ್ಗಸೂಚಿಗಳನ್ನು ಎಲ್ಲ ಪರೀಕ್ಷಾ ಕೇಂದ್ರಗಳಲ್ಲಿ ಕಟ್ಟುನಿಟ್ಟಾಗಿ ಪಾಲಿಸಬೇಕು. ಸುಗಮ ಪರೀಕ್ಷೆಗಾಗಿ ಮಾರ್ಗಾಧಿಕಾರಿ, ಸ್ಥಳೀಯ ನಿರೀಕ್ಷಣಾಧಿಕಾರಿ, ಮೇಲ್ವಿಚಾರಕರನ್ನು ನಿಯಮಿಸಲಾಗಿದೆ. ನಿಯೋಜಿತ ಅಧಿಕಾರಿಗಳು ತಮಗೆ ವಹಿಸಲಾದ ಜವಾಬ್ದಾರಿಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕು.

> ಪರೀಕ್ಷಾ ದಿನಗಳಂದು ಪ್ರಶ್ನೆ ಪತ್ರಿಕೆಗಳನ್ನು ನಿಗದಿತ ಸಮಯದೊಳಗಾಗಿ ಎಲ್ಲ ಪರೀಕ್ಷಾ ಕೇಂದ್ರಗಳಿಗೆ ತಲುಪಿಸಬೇಕು. ಪರೀಕ್ಷೆಗೆ ನಿಯೋಜಿತ ಅಧಿಕಾರಿ, ಸಿಬ್ಬಂದಿಗಳು ನಿಗದಿತ ಸಮಯದೊಳಗಾಗಿಯೇ ತಮ್ಮ ಪರೀಕ್ಷಾ ಕೇಂದ್ರಗಳಿಗೆ ಹಾಜರಾಗಬೇಕು. ಜಿಲ್ಲೆಯಲ್ಲಿ ಜರುಗಲಿರುವ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ದೋಷಾರೋಪಣೆಗಳಿಗೆ ಆಸ್ಪದ ನೀಡದಂತೆ ಸುಗಮವಾಗಿ ಜರುಗಿಸುವಂತೆ ನಿರ್ದೇಶನ ನೀಡಿದರು.

ಕರ್ನಾಟಕ ಲೋಕಸೇವಾ ಆಯೋಗದ ನಿರ್ದೇಶನದಂತೆ ಎಲ್ಲ ಪರೀಕ್ಷಾ ಕೇಂದ್ರಗಳಲ್ಲಿ ಜಾಮರ್ ಹಾಗೂ ಸಿ.ಸಿ.ಟಿ.ವಿ ಗಳನ್ನು ಕಡ್ಡಾಯವಾಗಿ ಅಳವಡಿಸಬೇಕು. ಆಯೋಗ ನಿಗದಿಪಡಿಸಿದ ಗುರುತಿನ ಚೀಟಿ ಹಾಗೂ ಪ್ರವೇಶ ಪತ್ರವನ್ನು ಕೂಲಂಕೂಷವಾಗಿ ಪರಿಶೀಲಿಸುವುದರ ಜೊತೆಗೆ ಪ್ರತಿಯೊಬ್ಬ ಅಭ್ಯರ್ಥಿಯನ್ನು ಆಯೋಗದ ನಿರ್ದೇಶನದಂತೆ ತಪಾಸಣೆ ಜರುಗಿಸಿದ ನಂತರವೇ ಪರೀಕ್ಷಾ ಕೊಠಡಿಗಳಿಗೆ ಪ್ರವೇಶ ನೀಡುವಂತೆ ನಿಗಾವಹಿಸಬೇಕು. ಪರೀಕ್ಷಾ ಕೇಂದ್ರಗಳಿಗೆ ಆಗಮಿಸುವ ಪರೀಕ್ಷಾರ್ಥಿಗಳಿಗೆ ಪರೀಕ್ಷಾ ಕೊಠಡಿಗಳಿಗೆ ತೆರಳಲು ಗೊಂದಲಗಳಾಗದಂತೆ ಅಗತ್ಯದ ಸೂಚನಾ ಫಲಕಗಳನ್ನು ಅಳವಡಿಸಬೇಕು. ಹಾಗೂ ಪರೀಕ್ಷಾ ಕೇಂದ್ರಗಳಲ್ಲಿ ಅಗತ್ಯದ ಮೂಲ ಸೌಕರ್ಯ ವ್ಯವಸ್ಥೆಗಳನ್ನು ಮಾಡಿಕೊಳ್ಳುವಂತೆ ತಿಳಿಸಿದರು.

ಸಭೆಯಲ್ಲಿ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಂ.ಎ.ರಡ್ಡೇರ, ಶಿಕ್ಷಣ ಇಲಾಖೆಯ ಜಿ.ಎಲ್.ಬಾರಾಟಕ್ಕೆ ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿ ಡಾ.ಜಿನಗಾ, ವಿವಿಧ ಶಾಲಾ ಕಾಲೇಜುಗಳ ಮುಖ್ಯಸ್ಥರುಗಳು ಉಪಸ್ಥಿತರಿದ್ದರು.



■ ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ರಾಜ್ಯ ಸರಕಾರಿ ನೌಕರ ಸಂಘದ ವತಿಯಿಂದ ಇತ್ತೀಚೆಗೆ ನಡೆದ 2023-24ನೇ ಸಾಲಿನ ಪ್ರತಿಭಾವಂತ ವಿದ್ಯಾರ್ಥಿಗಳ ಗದಗ ಜಿಲ್ಲಾ ಮಟ್ಟದ ಪ್ರತಿಭಾ ಪುರಸ್ಕಾರ ಮತ್ತು ಸರಕಾರಿ ನೌಕರರ ವಾರ್ಷಿಕ ಮಹಾಸಭೆಯಲ್ಲಿ ಸಂಘದ ಪದಾಧಿಕಾರಿಗಳು ಸಂಘದ ರಾಜ್ಯಾಧ್ಯಕ್ಷ ಸಿ.ಎಸ್. ಷಡಕ್ಷರಿ ಹಾಗೂ ರಾಜ್ಯ ಉಪಾಧ್ಯಕ್ಷ ರವಿ ಗುಂಜೀಕರರನ್ನು ಸನ್ಮಾನಿಸಿದರು. ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್., ಗೌರವಾಧ್ಯಕ್ಷರಾದ ಡಾ. ಬಸವರಾಜ ಬಳ್ಳಾರಿ, ಸಂಘದ ಪದಾಧಿಕಾರಿಗಳು ಇದ್ದರು.

## ದಲಿತ ಸಂಘಟನೆಯಿಂದ ಧರಣಿ



■ ವಿಜಯಸಾಕ್ಷಿ ಸುದ್ದಿ, ಗದಗ

ಇಲ್ಲಿನ ಹರ್ಲಾಪುರ ಗ್ರಾಮದ ಡಾ. ಅಂಬೇಡ್ಕರ್ ನಗರದಲ್ಲಿ ಹಲವು ವರ್ಷಗಳಿಂದ ಎದುರಿಸುತ್ತಿರುವ ಚರಂಡಿ ನೀರಿನ ಸಮಸ್ಯೆಯ ಕುರಿತು ಹರ್ಲಾಪೂರ ಗ್ರಾಮ ಪಂಚಾಯಿತಿ ಎದುರು ದಲಿತ ಸಂಘಟನೆ ವತಿಯಿಂದ ಅಹೋರಾತ್ರಿ ಧರಣಿ ಹಮ್ಮಿಕೊಂಡಿದ್ದು, ಧರಣಿ ಸ್ಥಳಕ್ಕೆ ತಾ.ಪಂ ಇಓ ಹಿರಾಲಾಲ್ ಜನಗಿ, ತಾಲೂಕು ಸವಾಜ ಕಲ್ಯಾಣ ಅಧಿಕಾರಿ, ಪಿಡಿಓ ಭೇಟಿ ನೀಡಿದರು.

ಈ ಸಂದರ್ಭದಲ್ಲಿ ಡಿಎಸ್‌ಎಸ್ (ಅಂಬೇಡ್ಕರ ವಾದ) ಜಿಲ್ಲಾ ಸಂಚಾಲಕ ಬಾಲರಾಜ ಅರಬರ, ನಾಗರಾಜ್ ಗೋಕಾವಿ, ಮಾರುತಿ ಯೇಡೆಪುರು, ಶಿವಾನಂದ ಅಳವಂಡಿ, ಮಂಜುನಾಥ್ ಅಳವಂಡಿ, ಹುಚ್ಚಪ್ಪ ತಿರಕನ್ನವರ, ಸೋಮಣ್ಣ, ಬಾಲಬಸವ ಪ್ರಸಾದ ಗುತ್ತೆನ್ನವರು, ಹನಮಂತಪ್ಪ ಯಡಿಯಾಪುರ, ಮಂಜುನಾಥ್ ಬರದೇಲಿ, ಮಹೇಶ ಗುತ್ತೆನ್ನವರ, ಪರಶುರಾಮ್ ಪೂಜಾರ್, ಷಣ್ಮುಖಪ್ಪ ತಿರಕನ್ನವರ, ಶಿವಪ್ಪ ಬಾಲಬಸವರ, ನಾಗರಾಜ್ ಯಡಿಯಾಪುರ ಮುಂತಾದವರಿದ್ದರು

## ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಗೆ ಪುಸ್ತಕಗಳ ಆಹ್ವಾನ

■ ವಿಜಯಸಾಕ್ಷಿ ಸುದ್ದಿ, ಗದಗ

2023ರಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟಗೊಂಡ ಸಾಹಿತ್ಯ, ಕಲೆ, ವಿಜ್ಞಾನ, ವೃತ್ತಿ, ಶಿಕ್ಷಣ, ಕೌಶಲ್ಯಾಭಿವೃದ್ಧಿ, ಆದಾಯ, ಉತ್ಪಾದನಾ ಯೋಜನೆ, ಸ್ಪರ್ಧಾತ್ಮಕ, ಪಠ್ಯಪುಸ್ತಕ, ಸಾಂದರ್ಭಿಕ ಮತ್ತು ಪರಾಮರ್ಶನ ಕೃತಿಗಳು ಹಾಗೂ ಮಕ್ಕಳ ಸಾಹಿತ್ಯ/ನವಸಾಕ್ಷರರ ಕೃತಿಗಳು ಇತ್ಯಾದಿ ವಿಷಯಗಳ ಕನ್ನಡ/ ಆಂಗ್ಲ/ಇತರೆ ಭಾರತೀಯ ಭಾಷೆಯ ಗ್ರಂಥಗಳ ಆಯ್ಕೆಗೆ ಲೇಖಕರು, ಲೇಖಕ-ಪ್ರಕಾಶಕರು ಮತ್ತು ಪ್ರಕಟಣಾ ಸಂಸ್ಥೆಗಳಿಂದ ಪುಸ್ತಕಗಳನ್ನು ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಗೆ ಆಯ್ಕೆಗಾಗಿ ಸ್ವೀಕರಿಸಲು ಆಹ್ವಾನಿಸಲಾಗಿದೆ.

2023ರಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟವಾದ ಪುಸ್ತಕಗಳನ್ನು ಗ್ರಂಥಸ್ವಾಮ್ಯ ವಿಭಾಗ, ರಾಜ್ಯ ಕೇಂದ್ರ, ಗ್ರಂಥಾಲಯ, ಕಬ್ಬನ್ ಉದ್ಯಾನವನ-ಬೆಂಗಳೂರು ಇಲ್ಲಿ ಜನವರಿ 31ರ ಒಳಗಾಗಿ ಕಾಪಿರೈಟ್ ಮಾಡಿಸಿರುವ ಪುಸ್ತಕಗಳನ್ನು ಆಯ್ಕೆಗಾಗಿ ಅರ್ಜಿಯೊಂದಿಗೆ ಪುಸ್ತಕದ ಒಂದು ಪ್ರತಿಯನ್ನು (ನೋಂದಣಿ ಪತ್ರದ ಪ್ರತಿಯೊಂದಿಗೆ) ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, 4ನೇ ಮಹಡಿ, ಡಾ. ಅಂಬೇಡ್ಕರ್ ವೀದಿ, ಬೆಂಗಳೂರು ಇಲ್ಲಿಗೆ ಫೆಬ್ರುವರಿ 2ರ ಸಂಜೆ 5 ಗಂಟೆಯೊಳಗಾಗಿ ಸಲ್ಲಿಸಬೇಕು. ನಂತರ ಬಂದ ಪುಸ್ತಕಗಳನ್ನು ಸ್ವೀಕರಿಸಲಾಗುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ಮುಖ್ಯ ಗ್ರಂಥಾಲಯಾಧಿಕಾರಿಗಳ ಕಚೇರಿ, ಜಿಲ್ಲಾ ಕೇಂದ್ರ ಗ್ರಂಥಾಲಯ, ಕೆ.ಎಚ್. ಪಾಟೀಲ ಜಿಲ್ಲಾ ಕ್ರೀಡಾಂಗಣ-ಗದಗ, ದೂರವಾಣಿ ಸಂಖ್ಯೆ-08372-220085 ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

## ಸಶಸ್ತ್ರ ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗಳಿಗೆ ಲಿಖಿತ ಪರೀಕ್ಷೆ

■ ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯಲ್ಲಿ ಖಾಲಿ ಇರುವ ಸಶಸ್ತ್ರ ಪೊಲೀಸ್ ಕಾನ್ಸ್‌ಟೇಬಲ್ (ಸಿಎಆರ್ & ಡಿಎಆರ್) (ಪುರುಷ & ತೃತೀಯ ಲಿಂಗ ಪುರುಷ) 3064 ಹುದ್ದೆಗಳಿಗೆ ಲಿಖಿತ ಪರೀಕ್ಷೆಯನ್ನು ಜ. 28 ರಂದು ಬೆಳಿಗ್ಗೆ 11 ರಿಂದ 12-30 ಗಂಟೆಯವರೆಗೆ ರಾಜ್ಯಾದ್ಯಾಂತ ನಡೆಸಲಾಗುವುದು.

ಸದರಿ ಲಿಖಿತ ಪರೀಕ್ಷೆಗೆ ಅರ್ಹರಿರುವ ಅಭ್ಯರ್ಥಿಗಳಿಗೆ ಕರೆಪತ್ರದ ಬಗ್ಗೆ ಮುಂಬರುವ ದಿನಗಳಲ್ಲಿ ಎಸ್.ಎಂ.ಎಸ್. ಮೂಲಕ ಮಾಹಿತಿ ನೀಡಲಾಗುವುದು. ಕರೆಪತ್ರದ ಲಿಂಕನ್ನು ಸಹ ಕಳುಹಿಸಲಾಗುವುದು. ಅಭ್ಯರ್ಥಿಗಳು ಕರೆಪತ್ರವನ್ನು ಡೌನಲೋಡ್ ಮಾಡಿಕೊಂಡು ನಿಗದಿಪಡಿಸಿದ ದಿನಾಂಕದಂದು ಲಿಖಿತ ಪರೀಕ್ಷೆಗೆ ಹಾಜರಾಗಬೇಕೆಂದು ಪ್ರಕಟಣೆ ತಿಳಿಸಿದೆ.

## ಕೃಷಿ ಉದ್ಯಮಶೀಲತಾ ಮಾರ್ಗದರ್ಶನ



■ ವಿಜಯಸಾಕ್ಷಿ ಸುದ್ದಿ, ಧಾರವಾಡ

ಇಲ್ಲಿನ ಕೃಷಿ ವಿಶ್ವ ವಿದ್ಯಾಲಯದಲ್ಲಿ ಜ.16ರಂದು ನಡೆದ 'ಕೃಷಿಕ' ನವೋದ್ಯಮ ಪೋಷಣಾ ಕೇಂದ್ರದ ಕೃಷಿ ಉದ್ಯಮಶೀಲತಾ ಮಾರ್ಗದರ್ಶನ ಕಾರ್ಯಕ್ರಮವನ್ನು ಧಾರವಾಡ ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ. ಪಿ.ಎಲ್. ಪಾಟೀಲ ಉದ್ಘಾಟಿಸಿದರು.

ಈ ಕಾರ್ಯಕ್ರಮವು ಭಾರತ ಸರ್ಕಾರದ ಕೃಷಿ ಹಾಗೂ ರೈತರ ಕಲ್ಯಾಣ ಸಚಿವಾಲಯದ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ-ರಫ್ತಾರ ಘಟಕದಿಂದ ಪ್ರಾಯೋಜಿಸಲ್ಪಟ್ಟಿತ್ತು. ಎರಡು ತಿಂಗಳ ತರಬೇತಿಗಾಗಿ 33 ನೂತನ ಕೃಷಿ ನವೋದ್ಯಮಗಳನ್ನು ಆಯ್ಕೆ ಮಾಡಲಾಗಿದೆ. ಸಂಭಾವ್ಯ ಕೃಷಿ ಉದ್ಯಮಿಗಳಿಗೆ ತರಬೇತಿ ಹಾಗೂ ಮಾರ್ಗದರ್ಶನದ ಮೂಲಕ ವಿನೂತನ ಕೃಷಿ ನವೋದ್ಯಮ ಆರಂಭಿಸಲು ಪ್ರಾಯೋಗಿಕ, ತಾಂತ್ರಿಕ ಮತ್ತು ಔದ್ಯೋಗಿಕ ಮಾರ್ಗದರ್ಶನ ಒದಗಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ.

ಪ್ರಧಾನ ಸಂಶೋಧಕ ಹಾಗೂ 'ಕೃಷಿಕ' ನವೋದ್ಯಮ ಪೋಷಣಾ ಕೇಂದ್ರದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ಎಸ್.ಎಸ್. ಡೊಳ್ಳಿ ಸ್ವಾಗತಿಸಿದರು. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ವಿನಾಯಕ ಹೊಸಮನಿ ವಂದಿಸಿದರು. ಅಸೋಸಿಯೇಷನ್ ಫಾರ್ ಸ್ಟಾರ್ಟಪ್ಸ್ ಇನ್ ಟೆಕ್ನಾಲಜಿ & ರಿಫೈನ್‌ಮೆಂಟ್ ಇನ್ ಅಗ್ರಿಕಲ್ಚರ್ ಎಕ್ಸಿಕ್ಯುಟಿವ್ ಡೈರೆಕ್ಟರ್ ಡಾ. ಎ.ಎಸ್. ವಸ್ತ್ರದ ಹಾಗೂ ರಫ್ತಾರ್ ಸಿಬ್ಬಂದಿ ಉಪಸ್ಥಿತರಿದ್ದರು.

# ಸರ್ಕಾರ ಕೂಡಲೇ ಸ್ಪಂದಿಸಿರುವುದು ಅಭಿನಂದನಾರ್ಹ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಸೂರಣಗಿ ಗ್ರಾಮದಲ್ಲಿ ಜ.8ರ ರಾತ್ರಿ ನಟ ಯಶ್ ಅಭಿಮಾನಿಗಳು ಯಶ್ ಅವರ ಕಟೌಟ್ ನಿಲ್ಲಿಸುವ ವೇಳೆ ವಿದ್ಯುತ್ ತಂತಿ ಸ್ಪರ್ಶದಿಂದ ದುರ್ಮರಣಕ್ಕೀಡಾದ ಮೂವರು ಯುವಕರ ಕುಟುಂಬಗಳಿಗೆ ಮಾಜಿ ಉಪಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ, ಶಾಸಕ ಡಾ. ಚಂದ್ರು ಲಮಾಣಿ ಇತ್ತೀಚೆಗೆ ಭೇಟಿ ನೀಡಿ ಮೃತರ ಕುಟುಂಬದವರಿಗೆ ಸಾಂತ್ವನ ಹೇಳಿ ಸಹಾಯಧನ ನೀಡಿದರು.



ಈ ವೇಳೆ ಈಶ್ವರಪ್ಪ ಮೃತರ ಕುಟುಂಬಸ್ಥರಿಗೆ ಸಾಂತ್ವನ ಹೇಳಿ, ಧೈರ್ಯ ಕಳೆದುಕೊಳ್ಳುವುದು ಬೇಡ, ಹೆತ್ತವರ ನೋವು ವರ್ಣಿಸಲಸಾಧ್ಯ. ಇದೊಂದು ದೊಡ್ಡ ದುರಂತವಾಗಿದ್ದು ಮನೆಗೆ ಆಧಾರವಾಗಿದ್ದ ಮಕ್ಕಳೇ ಇಲ್ಲದಾಗ ನೋವು ಸಹಿಸಲಾಗದು. ಸರ್ಕಾರ ಕೂಡಲೇ ಸ್ಪಂದಿಸಿರುವುದು ಅಭಿನಂದನಾರ್ಹ ಎಂದರಲ್ಲದೆ, ಮೃತ ಕುಟುಂಬಗಳಿಗೆ ತಲಾ 20 ಸಾವಿರ ರೂ.ಗಳ ಸಹಾಯಧನ ನೀಡಿದರು.

ಶಾಸಕ ಡಾ. ಚಂದ್ರು ಲಮಾಣಿಯವರು ಕರ್ನಾಟಕ ಆದಿ ಜಾಂಬವ ಅಭಿವೃದ್ಧಿ ನಿಗಮದಿಂದ ಮೃತ ಕುಟುಂಬಗಳಿಗೆ ತಲಾ 1 ಲಕ್ಷ ರೂ. ಗಳ ಪರಿಹಾರ ಧನ ಮತ್ತು 1 ಲಕ್ಷ ರೂ.ಗಳ ಬ್ಯಾಂಕ್ ಸಬ್ಸಿಡಿ ಸಾಲದ ಚೆಕ್ಕನ್ನು ನೀಡಿದರು. ನಿಗಮದ ಜಿಲ್ಲಾ ವ್ಯವಸ್ಥಾಪಕ ಆರ್. ನಾಯ್ಕರ್, ಬಿಜೆಪಿ ಅಧ್ಯಕ್ಷ ಫಕ್ಕೀರೇಶ ರಟ್ಟಿಹಳ್ಳಿ, ಜಿಲ್ಲಾ ಬಿಜೆಪಿ ಖಜಾಂಚಿ ನಾಗರಾಜ ಕುಲಕರ್ಣಿ, ಕಾಂತೇಶ ಈಶ್ವರಪ್ಪ, ಸುನೀಲ ಮಹಾಂತಶೆಟ್ಟರ, ಮಲ್ಲಿಕಾರ್ಜುನ ಹಳೆಮನಿ, ದೇವಣ್ಣ ಮತ್ತೂರ, ಸಿದ್ದು ದುರ್ಗಣ್ಣವರ, ವೀರಣ್ಣ ಅಕ್ಕೂರ, ಹಾಲಪ್ಪ ಸೂರಣಗಿ, ಬಸವರಾಜ ಇಟಗಿ, ಶಿವಪ್ಪ ಲಮಾಣಿ, ಕುಮಾರ ಬೆಟಗೇರಿ, ಬಸವರಾಜ ಕಲ್ಲೂರ, ಅಭಯ ಜೈನ್ ಮುಂತಾದವರಿದ್ದರು.

### ಸೈಟ್ ಕೊಡದ ಹುಬ್ಬಳ್ಳಿಯ ರೇಣುಕಾ ಲಕ್ಷ್ಮೀ ಅಸೋಸಿಯೇಟ್ಸ್

## ದಂಡ ವಿಧಿಸಿದ ಜಿಲ್ಲಾ ಗ್ರಾಹಕರ ಆಯೋಗ

■ ವಿಜಯಸಾಕ್ಷಿ ಸುದ್ದಿ, ಧಾರವಾಡ

ಹುಬ್ಬಳ್ಳಿಯ ಗೋಕುಲ ರಸ್ತೆಯ ಮಂಜುನಾಥ ನಗರದ ನಿವಾಸಿ ಶಾರದಾ ಕೈರವಾಡಗಿರವರು ಹುಬ್ಬಳ್ಳಿಯ ರೇಣುಕಾ ಲಕ್ಷ್ಮೀ ಅಸೋಸಿಯೇಟ್ಸ್‌ನವರು ನಾಗಶೆಟ್ಟಿಕೊಪ್ಪದಲ್ಲಿ ನಿರ್ಮಿಸುತ್ತಿದ್ದ ಗಣೇಶ ಟೌನ್‌ಶಿಪ್‌ನಲ್ಲಿ ರೂ.14,40,000ಗೆ 2400 ಚ.ಅ.ಯ ಪ್ಲಾಟನ್ನು ಖರೀದಿಸಿದ್ದರು. ಈ ಬಗ್ಗೆ ದೂರುದಾರಳು 5 ಲಕ್ಷ ರೂ. ಮುಂಗಡ ಹಣ ಕೊಟ್ಟಿದ್ದರು. ಆ ಹಣ ಪಡೆದು ಎದುರುದಾರ ರೇಣುಕಾ ಲಕ್ಷ್ಮೀ ಅಸೋಸಿಯೇಟ್ಸ್‌ನ ಮಾಲೀಕ ಆನಂದ ಹಬೀಬ ದೂರುದಾರಳಿಗೆ 22/01/2018ರಂದು ಖರೀದಿ ಕರಾರು ಪತ್ರ ಬರೆದುಕೊಟ್ಟಿದ್ದರು.

ಹಲವಾರು ವರ್ಷಗಳು ಕಳೆದರೂ ಎದುರುದಾರರು ಸೈಟ್ ಖರೀದಿ ಹಾಕಿಕೊಟ್ಟಿಲ್ಲ ಅಥವಾ ತನಗೆ ಹಣ ವಾಪಸ್ಸು ಕೊಟ್ಟಿಲ್ಲ ಎಂದು, ಅವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಜಿಲ್ಲಾ ಗ್ರಾಹಕರ ಆಯೋಗಕ್ಕೆ 29/09/2023ರಂದು ದೂರು ಸಲ್ಲಿಸಿದ್ದರು. ಸದರಿ ದೂರಿನ ಬಗ್ಗೆ ಕೂಲಂಕುಷವಾಗಿ ವಿಚಾರಣೆ ನಡೆಸಿದ ಆಯೋಗದ ಅಧ್ಯಕ್ಷ ಈಶಪ್ಪ.ಕ. ಭೂತೆ, ಸದಸ್ಯರಾದ ವಿಶಾಲಾಕ್ಷಿ.ಅ. ಬೋಳಶೆಟ್ಟಿ ಹಾಗೂ ಪ್ರಭು.ಸಿ. ಹಿರೇಮಠ ನಿಗದಿತ ಅವಧಿಯಲ್ಲಿ ಶ್ರೀ ಗಣೇಶ ಲೇಔಟ್ ನಿರ್ಮಿಸಿ ಅದರಲ್ಲಿ ದೂರುದಾರರಿಗೆ ಮಾರಾಟ ಮಾಡಿದ ಪ್ಲಾಟ್ ನಂ.8ರ ಖರೀದಿ ಪತ್ರ ನೋಂದಾಯಿಸಿಕೊಡುವುದು ಎದುರುದಾರ ರೇಣುಕಾ ಲಕ್ಷ್ಮೀ ಅಸೋಸಿಯೇಟ್ಸ್‌ರವರ ಕರ್ತವ್ಯವಾಗಿದೆ. ಆದರೆ 6-7 ವರ್ಷ ಕಳೆದರೂ ಎದುರುದಾರ ಆನಂದ ಹಬೀಬ ಲೇಔಟ್ ನಿರ್ಮಾಣ ಮಾಡಿಲ್ಲ. ದೂರುದಾರರಿಗೆ ಪ್ಲಾಟ್ ಖರೀದಿ ಮಾಡಿಕೊಟ್ಟಿಲ್ಲ. ಇದು ಗ್ರಾಹಕರ ರಕ್ಷಣಾ ಕಾಯ್ದೆ ಅಡಿ ಸೇವಾ ನ್ಯೂನತೆ ಆಗುತ್ತದೆ ಎಂದು ಆಯೋಗ ತೀರ್ಪು ನೀಡಿದೆ.

ದೂರುದಾರರಿಂದ ಮುಂಗಡವಾಗಿ ಪಡೆದ ರೂ. 5 ಲಕ್ಷದಲ್ಲಿ ರೂ.1 ಲಕ್ಷ ಎದುರುದಾರ ಹಿಂದಿರುಗಿಸಿದ್ದು, ಉಳಿದ ರೂ. 4 ಲಕ್ಷಗಳ ಮೇಲೆ 22/01/2018ರಿಂದ ಪೂರ್ತಿ ಹಣ ಸಂದಾಯ ವಾಗುವವರೆಗೆ ಶೇ 8ರಂತೆ ಬಡ್ಡಿ ಲೆಕ್ಕ ಹಾಕಿ ಹಿಂದಿರುಗಿಸುವಂತೆ ಆಯೋಗ ಎದುರುದಾರ ಆನಂದ ಹಬೀಬರವರಿಗೆ ನಿರ್ದೇಶಿಸಿದೆ. ದೂರುದಾರರಿಗೆ ಆಗಿರುವ ಅನಾನುಕೂಲ ಮತ್ತು ಮಾನಸಿಕ ಹಿಂಸೆಗಾಗಿ ರೂ.50 ಸಾವಿರ ಪರಿಹಾರ ಮತ್ತು ಪ್ರಕರಣದ ಖರ್ಚು-ವೆಚ್ಚ ಎಂದು ರೂ. 10 ಸಾವಿರ ಕೊಡಲು ಆದೇಶಿಸಿದೆ.

### ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹದ ಅಂಗವಾಗಿ ರಸ್ತೆ ನಿಯಮಗಳ ಕುರಿತು ಜಾಗೃತಿ

# ಇನ್ನೊಬ್ಬರ ಜೀವಕ್ಕೂ ಬೆಲೆ ಇದೆ

■ ವಿಜಯಸಾಕ್ಷಿ ಸುದ್ದಿ, ಧಾರವಾಡ

ನೆಹರು ಯುವ ಕೇಂದ್ರದಿಂದ ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹದ ಅಂಗವಾಗಿ ಒಂದು ವಾರಗಳ ಕಾಲ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ರಸ್ತೆ ನಿಯಮಗಳ ಕುರಿತು ಚಾಲಕರಿಗೆ ಮತ್ತು ವಾಹನ ಮಾಲೀಕರಿಗೆ ಜಾಗೃತಿ ಮೂಡಿಸಲಾಗುವುದು ಎಂದು ನೆಹರು ಯುವ ಕೇಂದ್ರದ ಜಿಲ್ಲಾ ಯುವ ಅಧಿಕಾರಿ ಎಮ್. ಗೌತಮ ರೆಡ್ಡಿ ಹೇಳಿದರು.




ಭಾರತ ಸರಕಾರ ನೆಹರು ಯುವ ಕೇಂದ್ರ ಧಾರವಾಡ, ಹುಬ್ಬಳ್ಳಿ-ಧಾರವಾಡ ಪೊಲೀಸ್ ಕಮಿಷನರೇಟ್ ಸಂಚಾರ ಪೊಲೀಸ್ ಠಾಣೆ ಧಾರವಾಡ ಹಾಗೂ ಅಗ್ನಿಶಾಮಕ ಇಲಾಖೆ ಧಾರವಾಡ ಇವರುಗಳ ಸಹಯೋಗದಲ್ಲಿ ಸಿದ್ಧರಾಮೇಶ್ವರ ಬಿಎಡ್ ಕಾಲೇಜಿನ ಸಭಾಂಗಣದಲ್ಲಿ ಐದನೇ ದಿನದ ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹ ಉದ್ಘಾಟಿಸಿ ಅವರು ಮಾತನಾಡಿದರು.

ಜ.11ಕ್ಕೆ ಶ್ರೀ ಮೃತ್ಯುಂಜಯ ಕಾಲೇಜ್, 12ಕ್ಕೆ ಜೆಎಸ್‌ಎಸ್ ಬಿ.ಎಡ್ ಕಾಲೇಜ್, 13ಕ್ಕೆ ಬೇಂದ್ರೆ ಭವನ, 16ಕ್ಕೆ ಕೆ.ಇ. ಬೋರ್ಡ್ ಕಾಲೇಜ್ ಹಾಗೂ 17ಕ್ಕೆ ಶ್ರೀ ಸಿದ್ಧರಾಮೇಶ್ವರ ಬಿ.ಎಡ್ ಕಾಲೇಜಿನಲ್ಲಿ ಐದನೇ ದಿನದ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಯುವ ಜನರಿಂದ ಧಾರವಾಡ ಟ್ರಾಫಿಕ್ ಸಿಗ್ನಲ್‌ಗಳಲ್ಲಿ ಸ್ವತಃ ತಾವೇ ಹೋಗಿ ವಾಹನ ಚಾಲಕರಿಗೆ ಸೀಟ್ ಬೆಲ್ಟ್ ಮತ್ತು ಬೈಕ್ ಸವಾರಿಗೆ ಹೆಲ್ಮೆಟ್ ಕಡ್ಡಾಯವಾಗಿ ಹಾಕಿಕೊಳ್ಳಬೇಕು ಎಂದು ರಸ್ತೆ ಸುರಕ್ಷತೆ ಬಗ್ಗೆ ಅರಿವು ಮೂಡಿಸುವ ಕಾರ್ಯ ಮಾಡಲಾಗಿದೆ ಎಂದು ಹೇಳಿದರು.

ಈ ಸಪ್ತಾಹದಲ್ಲಿ ಹುಬ್ಬಳ್ಳಿ-ಧಾರವಾಡ ಪೊಲೀಸ್ ಕಮಿಷನರೇಟ್ ಸಂಚಾರ ಪೊಲೀಸ್ ಠಾಣೆ ಧಾರವಾಡ ವತಿಯಿಂದ ಟ್ರಾಫಿಕ್ ಎಎಸ್‌ಐ ವಿರೇಶ ಬಳ್ಳಾರಿ, ಕಾಲೇಜಿನ ವಿದ್ಯಾರ್ಥಿಗಳಿಗೆ ಸಂಚಾರ ನಿಯಮಗಳು, ಟ್ರಾಫಿಕ್ ಕಾನೂನು ಮತ್ತು ವಾಹನ ಸವಾರರು ಮುಖ್ಯವಾಗಿ ತಮ್ಮ ವಾಹನದಲ್ಲಿ ಯಾವ ದಾಖಲೆ ಇಟ್ಟುಕೊಳ್ಳಬೇಕು ಎಂಬುದರ ಬಗ್ಗೆ ತಿಳಿಸಿದ್ದಾರೆ ಎಂದು ಹೇಳಿದರು.

> ಅಗ್ನಿಶಾಮಕ ಇಲಾಖೆಯ ಜಿಲ್ಲಾ ಅಧಿಕಾರಿ ಗೋವಿಂದಪ್ಪ ಟಿ. ಮಾತನಾಡಿ, ಬೆಂಕಿ ಹಾಗೂ ದುರಂತ ಘಟನೆ ಸಂಭವಿಸಿದ ತಕ್ಷಣ ಮಾಡಬೇಕಾದ ಕಾರ್ಯಗಳು ಹಾಗೂ ಸ್ವತಃ ಅಗ್ನಿ ಅವಘಡದಲ್ಲಿ ಸಿಕ್ಕಿಕೊಂಡಾಗ ಜೀವ ಉಳಿಸಿಕೊಳ್ಳಲು ಯಾವ ಉಪಾಯ ಮಾಡಬೇಕು ಎಂಬುದರ ಬಗ್ಗೆ ಕಾಲೇಜಿನ ಯುವ ಜನತೆಗೆ ಈ ಸಪ್ತಾಹದಲ್ಲಿ ತಿಳಿಸಲಾಗಿದೆ ಎಂದರು.

ಸಿದ್ಧರಾಮೇಶ್ವರ ಕಾಲೇಜಿನ ಕಾರ್ಯದರ್ಶಿ ಡಾ. ಕೆ.ಆರ್. ಹಿರೇಮಠ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ರಸ್ತೆ ಸುರಕ್ಷತೆಯ ವಿಚಾರದಲ್ಲಿ ಸಂಚಾರ ನಿಯಮಗಳನ್ನು ಪಾಲಿಸುವ ಕುರಿತು ಪ್ರತಿಯೊಬ್ಬರೂ ಆತ್ಮ ಶೋಧನೆ ಮಾಡಿಕೊಳ್ಳಬೇಕು. ಇನ್ನೊಬ್ಬರ ಜೀವಕ್ಕೂ ಬೆಲೆ ಇದೆ ಎನ್ನುವ ವಾಸ್ತವವನ್ನು ಅರಿತುಕೊಂಡು ರಸ್ತೆಯಲ್ಲಿ ವಾಹನ ಚಲಾವಣೆ ಮಾಡಬೇಕು ಎಂದರು.

ಈ ಸಂದರ್ಭದಲ್ಲಿ ಕಾಲೇಜಿನ ಪ್ರಾಚಾರ್ಯ ಡಾ. ಜಿ.ಕೆ. ಹಿರೇಮಠ, ಉಪನ್ಯಾಸಕ ಎಸ್.ಎಮ್. ಕೊಟಬಾಗಿ, ನೆಹರು ಯುವ ಕೇಂದ್ರದ ಸ್ವಯಂ ಸೇವಕ ಶಿವಾಜಿ ಎನ್.ಕೆ ಹಾಗೂ ಕಾಲೇಜಿನ ಸಿಬ್ಬಂದಿಗಳಿದ್ದರು. ಶ್ರೀಲಕ್ಷ್ಮೀ ಬಿ. ಕಾರ್ಯಕ್ರಮ ನಿರೂಪಿಸಿದರೆ, ಸಾಬರೆಡ್ಡಿ ವಂದಿಸಿದರು.

## ವ್ಯಂಗ್ಯಚಿತ್ರ ಪ್ರದರ್ಶನ, ಕಾರ್ಯಾಗಾರ

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಮುಂಬರುವ ಲೋಕಸಭೆ ಚುನಾವಣೆ-2024ರ ಹಿನ್ನೆಲೆಯಲ್ಲಿ ಮತದಾರರಲ್ಲಿ ಮತದಾನದ ಕುರಿತು ಜಾಗೃತಿ ಮೂಡಿಸಲು ಕರ್ನಾಟಕ ಮುಖ್ಯ ಚುನಾವಣಾಧಿಕಾರಿಗಳ ಕಚೇರಿ ವತಿಯಿಂದ ಜನವರಿ 21ರಂದು ಬೆಳಿಗ್ಗೆ 9 ಗಂಟೆಯಿಂದ ಕಲಾವಿದರಿಗಾಗಿ 'ವ್ಯಂಗ್ಯಚಿತ್ರ ಪ್ರದರ್ಶನ ಮತ್ತು ಕಾರ್ಯಾಗಾರ'ವನ್ನು ವಿಧಾನಸೌಧ ಪೂರ್ವದಿಕ್ಕಿನ ಬಸವಣ್ಣನ ಪ್ರತಿಮೆ ಎದುರುಗಡೆ ಏರ್ಪಡಿಸಲಾಗಿದೆ.

ವೃತ್ತಿಪರ ಮತ್ತು ಹವ್ಯಾಸಿ ವ್ಯಂಗ್ಯಚಿತ್ರಕಾರರು, ಹವ್ಯಾಸಿ ಕಲಾವಿದರು, ಕಲಾ ವಿದ್ಯಾರ್ಥಿಗಳು ಈ ಜಾಗೃತಿ ಅಭಿಯಾನದಲ್ಲಿ ಭಾಗವಹಿಸಬಹುದು. ಚುನಾವಣೆ, ಮತದಾನದ ಮಹತ್ವ ಸಾರುವ, ಮತದಾನ ಪ್ರಕ್ರಿಯೆಯಲ್ಲಿ ನಾಗರಿಕರು ಭಾಗವಹಿಸುವುದನ್ನು ಪ್ರೋತ್ಸಾಹಿಸುವಂತಹ ವ್ಯಂಗ್ಯಚಿತ್ರಗಳನ್ನು ರಚಿಸಬೇಕು. ಆಯ್ಕೆಯಾದ 100 ವ್ಯಂಗ್ಯಚಿತ್ರಗಳನ್ನು ಜ.21ರಂದು ಪ್ರದರ್ಶನಕ್ಕೆ ಇರಿಸಲಾಗುತ್ತದೆ. ಅತ್ಯುತ್ತಮ 25 ಚಿತ್ರಗಳನ್ನು ಮತದಾನ ಜಾಗೃತಿ, ಪ್ರಚಾರಕ್ಕಾಗಿ ಬಳಸಿಕೊಳ್ಳಲಾಗುತ್ತದೆ ಹಾಗೂ ಆ ವ್ಯಂಗ್ಯಚಿತ್ರಗಳಿಗೆ ಗೌರವಧನವನ್ನು ನೀಡಲಾಗುತ್ತದೆ.

ಷರತ್ತು-ನಿಬಂಧನೆಗಳು: ಚಿತ್ರಗಳಲ್ಲಿ ಯಾವುದೇ ರಾಜಕೀಯ ಪಕ್ಷಗಳ ಪ್ರಚಾರ ಮತ್ತು ವ್ಯಂಗ್ಯ ಇರಬಾರದು. ಚಿತ್ರಗಳು ಹೊಸದಾಗಿದ್ದು, ಈ ಹಿಂದೆ ಯಾವುದೇ ಪ್ರಚಾರದಲ್ಲಿ ಬಳಸಿಕೊಂಡಿರಬಾರದು. ಚಿತ್ರಗಳು ಸ್ವಂತ ರಚನೆಯಲ್ಲಿರಬೇಕು. (ಗ್ರಾಫಿಕ್ಸ್, ಕುಂಚ, ಪೆನ್ಸಿಲ್, ಪೆನ್ ಇತ್ಯಾದಿ) ಚಿತ್ರಗಳನ್ನು 1800*2400 ಅಳತೆಯ ಡಿಜಿಟಲ್ ಆವೃತ್ತಿಯಲ್ಲಿ ಸಲ್ಲಿಸಬೇಕು. ಆಯ್ಕೆಯಾದ ಚಿತ್ರಗಳ ಅಸಲಿ ಪ್ರತಿಗಳನ್ನು ಚುನಾವಣಾ ಆಯೋಗಕ್ಕೆ ಸಲ್ಲಿಸಬೇಕು. ಆಯ್ಕೆಯಾದ ಮೊದಲ 25 ಚಿತ್ರಗಳಿಗೆ ಗೌರವಧನ ನೀಡಲಾಗುವುದು. ಚಿತ್ರಗಳನ್ನು mediacellceo-karnataka@gmail.com ವಿಳಾಸಕ್ಕೆ ಕಳುಹಿಸಬೇಕು ಹಾಗೂ ಇಮೇಲ್‌ನಲ್ಲಿ ತಮ್ಮ ಹೆಸರು, ವಿಳಾಸ ಹಾಗೂ ಮೊಬೈಲ್ ಸಂಖ್ಯೆಯನ್ನು ತಪ್ಪದೇ ನಮೂದಿಸಿರಬೇಕು.

ಚಿತ್ರಗಳನ್ನು ಕಳುಹಿಸಲು ಕೊನೆಯ 19-01-2024 ಸಂಜೆ 5 ಗಂಟೆ. ಚಿತ್ರಗಳನ್ನು ಆಯ್ಕೆ ಮಾಡುವ ಹಾಗೂ ತಿರಸ್ಕರಿಸುವ ಅಧಿಕಾರ ಮುಖ್ಯ ಚುನಾವಣಾಧಿಕಾರಿಗಳಿಗೆ ಇರುತ್ತದೆ. ಸ್ಥಳದಲ್ಲೇ ಚಿತ್ರ ರಚನೆ ಮಾಡುವ ಕಲಾವಿದರು 21-01-2024ರಂದು ಬೆಳಗ್ಗೆ 9 ಗಂಟೆಗೆ ಹಾಜರಿರಬೇಕು. ಹೆಚ್ಚಿನ ಮಾಹಿತಿಗೆ ಮಾಧ್ಯಮ ಘಟಕ, ಮುಖ್ಯ ಚುನಾವಣಾಧಿಕಾರಿಗಳ ಕಚೇರಿ, ಶೇಷಾದ್ರಿ ರಸ್ತೆ, ಬೆಂಗಳೂರು. ದೂರವಾಣಿ: 9480841211 ಸಂಪರ್ಕಿಸಬಹುದು.

### ಕದಾಂಪೂರ-ಡೋಣಿ ರಸ್ತೆ ಸುಧಾರಣೆ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿದ ಶಾಸಕ ಜಿ.ಎಸ್. ಪಾಟೀಲ

# ನುಡಿದಂತೆ ನಡೆಯುವ ಏಕೈಕ ಪಕ್ಷ ಕಾಂಗ್ರೆಸ್

■ ವಿಜಯಸಾಕ್ಷಿ ಸುದ್ದಿ, ಮುಂಡರಗಿ

ರಾಜ್ಯದ ಜನರ ಹಿತಕ್ಕಾಗಿ ಸದಾ ಕಂಕಣಬದ್ಧರಾಗಿರುವ ನಮ್ಮ ಕಾಂಗ್ರೆಸ್ ಪಕ್ಷದ ಗ್ಯಾರಂಟಿ ಯೋಜನೆಗಳ ಅನುಷ್ಠಾನದಿಂದ ರಾಜ್ಯ ದಿವಾಳಿಯಾಗುತ್ತದೆ ಎನ್ನುವ ವಿರೋಧ ಪಕ್ಷಗಳಿಗೆ ನಮ್ಮ ಯೋಜನೆಗಳು ಮಾದರಿಯಾಗುತ್ತಿರುವದನ್ನು ಸಹಿಸಲು ಆಗುತ್ತಿಲ್ಲ. ದೇಶದ ಹಲವು ರಾಜ್ಯಗಳು ನಮ್ಮ ಪಕ್ಷದ ಗ್ಯಾರಂಟಿ ಯೋಜನೆಗಳನ್ನು ಅಳವಡಿಸಿಕೊಳ್ಳುತ್ತಿದ್ದಾರೆ. ದೇಶದಲ್ಲಿ ನುಡಿದಂತೆ ನಡೆಯುವ ಏಕೈಕ ಪಕ್ಷ ಕಾಂಗ್ರೆಸ್ ಪಕ್ಷ ಮಾತ್ರ ಎಂದು ರೋಣ ಮತಕ್ಷೇತ್ರದ ಶಾಸಕ ಜಿ.ಎಸ್. ಪಾಟೀಲ ಹೇಳಿದರು.

ಇಲ್ಲಿನ ಡಂಬಳ ಹೋಬಳಿಯ ಕದಾಂಪೂರ ಗ್ರಾಮದಲ್ಲಿ ಗುರುವಾರ ಲೋಕೋಪಯೋಗಿ ಇಲಾಖೆಯ 3 ಕೋಟಿ ರೂ ಅನುದಾನದಲ್ಲಿ ಕದಾಂಪೂರ-ಡೋಣಿ ರಸ್ತೆ ಸುಧಾರಣೆ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು.

ನಮ್ಮ ದೇಶ ಇಂದು ವಿಶ್ವ ಮಟ್ಟದಲ್ಲಿ ಸಾಧನೆ ಮಾಡುತ್ತಿರುವುದಕ್ಕೆ ನಮ್ಮ ಕಾಂಗ್ರೆಸ್ ಪಕ್ಷ ಈ ಹಿಂದೆ ನಡೆಸಿದ ಉತ್ತಮ ಆಡಳಿತವೇ ಮೂಲ ಕಾರಣವಾಗಿದೆ. ಗ್ಯಾರಂಟಿ ಯೋಜನಗಳಿಂದ ಜನ ಕಾಂಗ್ರೆಸ್ ಪಕ್ಷದ ಬಗ್ಗೆ ಅಪಾರವಾದ ಗೌರವ, ವಿಶ್ವಾಸವನ್ನು ಹೊಂದಿದ್ದಾರೆ. ಬಡವರು, ಹಿಂದುಳಿದ ವರ್ಗ, ದಲಿತರು, ಅಲ್ಪಸಂಖ್ಯಾತರು ಸೇರಿದಂತೆ ಪ್ರತಿಯೊಂದು ಸಮುದಾಯವೂ ನಮ್ಮ ಸರ್ಕಾರದ ಜನಪರ ಯೋಜನಗಳ ಸದುಪಯೋಗವನ್ನು ಪಡೆದುಕೊಂಡು ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಸಮಾಜದ ಮುಖ್ಯವಾಹಿನಿಗೆ ಬರಬೇಕು ಎಂದರು.




ಮುಂಬರುವ ಲೋಕಸಭೆ ಚುನಾವಣೆಯಲ್ಲಿ ನಮ್ಮ ರಾಜ್ಯದಿಂದ ಹೆಚ್ಚು ಅಭ್ಯರ್ಥಿಗಳು ಗೆಲುವು ಸಾಧಿಸುವ ವಿಶ್ವಾಸವಿದೆ. ಕೇಂದ್ರದ ಬಿಜೆಪಿ ಸರ್ಕಾರದ ಜನವಿರೋಧಿ ಆಡಳಿತದಿಂದ ಜನ ಬೇಸರಗೊಂಡಿದ್ದಾರೆ. ಮುಂಬರುವ ದಿನಗಳಲ್ಲಿ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಹಂತ ಹಂತವಾಗಿ ಆದ್ಯತೆ ನೀಡಲಾಗುವುದು ಎಂದು ಶಾಸಕ ಜಿ.ಎಸ್. ಪಾಟೀಲ ಹೇಳಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಡಿ.ಡಿ. ಮೊರನಾಳ ಪ್ರಸ್ತಾವಿಕವಾಗಿ ಮಾತನಾಡಿದರು. ಗ್ರಾಮ ಪಂಚಾಯಿತಿ ಅಧ್ಯಕ್ಷೆ ಹುಲಿಗೆವ್ವ ಉಡಚನಗೌಡ ಪಾಟೀಲ, ಉಪಾಧ್ಯಕ್ಷೆ ರೇಣುಕಾ ಎಂ.ಲಮಾಣಿ, ಬ್ಲಾಕ್ ಕಾಂಗ್ರೆಸ್ ಉಪಾಧ್ಯಕ್ಷ ಶಿವಕುಮಾರ ಹಿರೇಮಠ, ಮುಖಂಡ ಗೋಣಿಬಸಪ್ಪ ಎಸ್. ಕೊರ್ಲಹಳ್ಳಿ, ಬಸವರಡ್ಡಿ ಬಂಡಿಹಾಳ, ಮಹೇಶ ಗಡಗಿ, ಬಸುರಾಜ ಪೂಜಾರ, ಶಿವಕುಮಾರ ಹಿರೇಮಠ, ರಾಮನಗೌಡ ಹಿರೇಗೌಡರ, ಶರಣಪ್ಪ ಶಿರುಂದ, ಮಲ್ಲಿಕಾರ್ಜುನ ಕಾರದಪುಡಿ, ಕನಕಮೂರ್ತಿ ನರೇಗಲ್ಲ, ಗ್ರಾ.ಪಂ ಮಾಜಿ ಅಧ್ಯಕ್ಷೆ ಶಕುಂತಲಾ ಎಲ್.ಸಂಕಣ್ಣವರ, ನಿಂಗಪ್ಪ ಶಿರುಂದ, ತಮ್ಮಣ್ಣ ಶಿರುಂದ, ಶಾಂತಯ್ಯ ಮುತ್ತಿನಮಪೆಂಡಿಮಠ, ಮುದಕಪ್ಪ ಸಂಕಣ್ಣವರ, ಪರಶುರಾಮ ಹರಿಜನ, ರೇವಣಸಿದ್ದಪ್ಪ ಕರಿಗಾರ, ಶಿವಾಜಿನಗರ, ಗ್ರಾ.ಪಂ ಮಾಜಿ ಅಧ್ಯಕ್ಷ ಲಕ್ಷ್ಮಣ ಕುಬೇರ ಸಿಂಗ್, ಶರಣು ಸಂದಿಗೌಡ, ರಮೇಶ ಪವಾರ, ಮಾರುತಿ ಹೊಂಬಳ, ಧರ್ಮಸಿಂಗ್ ರಾಠೋಡ, ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿ ಉದಯಕುಮರ ಯಲಿವಾಳ, ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಎಂ.ಎಸ್. ಪಾಟೀಲ, ಸಹಾಯಕ ಅಭಿಯಂತರ ಮಲ್ಲಿಕಾರ್ಜುನ ಹಿರೇಮನಿ, ಸಂಜು ನಾಯಕ, ಪಿಡಿಓ ಪಾರ್ವತಿ, ಗ್ರಾ.ಪಂ ಸದಸ್ಯರು, ಗ್ರಾಮದ ಮುಖಂಡರು, ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು.

## ಕೆಆರ್‌ಎಸ್ ಪಕ್ಷದಿಂದ ಜಿಲ್ಲಾಧಿಕಾರಿಗಳಿಗೆ ಮನವಿ

■ ವಿಜಯಸಾಕ್ಷಿ ಸುದ್ದಿ, ಗದಗ

ಹಿರೇಕೊಪ್ಪ ಪ್ರಾಥಮಿಕ ಶಾಲೆಯ ಅಡುಗೆ ಸಹಾಯಕ ಹುದ್ದೆಯ ನೇಮಕಾತಿಯನ್ನು ಕಾನೂನು ಬದ್ಧವಾಗಿ ಮತ್ತು ವಿಧವೆಗೆ ನೀಡುವಂತೆ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಗದಗ ತಾಲೂಕು ರೈತ ಘಟಕದ ವತಿಯಿಂದ ಗದಗ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.



ಮನವಿ ಸಲ್ಲಿಸಿ ಮಾತನಾಡಿದ ಕೆಆರ್‌ಎಸ್ ರೈತ ಘಟಕ ಸಂಚಾಲಕ ಪ್ರಕಾಶ ಕೊತಬಾಳ, ಗದಗ ತಾಲೂಕ ಹುಯಿಲಗೋಳ ಗ್ರಾ.ಪಂ ವ್ಯಾಪ್ತಿಯ ಹಿರೇಕೊಪ್ಪ ಗ್ರಾಮದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಅಡುಗೆ ಸಹಾಯಕ ಹುದ್ದೆಯ ನೇಮಕ ಸಕ್ರಮವಾಗಿಲ್ಲ. ವಂಶ ಪಾರಂಪರಿಕವಾಗಿ ಹುದ್ದೆಯನ್ನು ಒಂದೇ ಕುಟುಂಬಕ್ಕೆ ನೀಡುತ್ತಿದ್ದು, ಕಾನೂನು ಬಾಹಿರ ಅಕ್ರಮ ರಾಜಕೀಯ ಪ್ರೇರಿತವಾಗಿದೆ. ಬದಲಾಗಿ, ಅದೇ ಗ್ರಾಮದ ವಿಧವೆ, ಜೀವನಾಧಾರವಿಲ್ಲದ ಮಹಿಳೆಗೆ ನೀಡುವಂತೆ ಗ್ರಾಮದ ಜನತೆಯ ಕೋರಿಕೆಯನ್ನು ಪರಿಗಣಿಸಬೇಕೆಂದರು.

ಈ ಸಂದರ್ಭದಲ್ಲಿ ಪಕ್ಷದ ರಾಜ್ಯ ಕಾನೂನು ಘಟಕದ ಪ್ರಧಾನ ಕಾರ್ಯದರ್ಶಿ ಜೊಸೆಫ ಉದೋಜಿ, ಲಕ್ಷ್ಮಣ, ಈಶಪ್ಪ ಶೇಷಗಿರಿ, ಹನಮಂತ ದಾಸರ ಸೇರಿದಂತೆ ಗ್ರಾಮಸ್ಥರು ಇದ್ದರು.

## 'ಮತ್ತೊಮ್ಮೆ ಮೋದಿ' ಅಭಿಯಾನಕ್ಕೆ ಚಾಲನೆ

■ ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಪುಟ್ಟರಾಜ ಗವಾಯಿಗಳ ಮಠದಲ್ಲಿ ಪೂಜ್ಯ ಶ್ರೀ ಕಲ್ಲಯ್ಯನವರ ಆಶೀರ್ವಾದೊಂದಿಗೆ 2024ರ ಲೋಕಸಭಾ ಚುನಾವಣೆಯ ಅಂಗವಾಗಿ 'ಸದೃಡ-ಸಮೃದ್ಧ ಭಾರತದ ಸಂಕಲ್ಪಕ್ಕೆ ಮತ್ತೊಮ್ಮೆ ಮೋದಿ' ಅಭಿಯಾನಕ್ಕೆ ಚಾಲನೆ ನೀಡಲಾಯಿತು.

ಸುಭದ್ರ-ಸಮೃದ್ಧ ಭಾರತಕ್ಕಾಗಿ ಐತಿಹಾಸಿಕ ಜನಪರ ಯೋಜನೆಗಳನ್ನು ಜಾರಿಗೊಳಿಸಿರುವ ಹಾಗೂ ಜನಸಾಮಾನ್ಯರ ಅಭಿವೃದ್ಧಿಗೆ ಗ್ಯಾರಂಟಿಯಾಗಿರುವ ಪ್ರಧಾನಿ ನರೇಂದ್ರ ಮೋದಿ ಅವರ ಪರವಾಗಿ ಇರುವ ಅಲೆಯನ್ನು ದುಪ್ಪಟ್ಟಾಗಿಸುವ ಸಂಕಲ್ಪ ನಮ್ಮದು ಎಂದರು.



ಈ ಸಂದರ್ಭದಲ್ಲಿ ಪಿ.ಸಿ. ಹಿರೇಮಠ, ಕೆ.ಪಿ. ಕೋಟಿಗೌಡರ ವಕೀಲರು, ರಾಜು ಹೊಂಗಲ, ಅಖಿಲ ಕುಮಾರ್ ಹಲಗತಿ, ರವಿ ನರಗುಂದ, ಸತೀಶ ಪಾಟೀಲ್, ಚಂದ್ರು ಮೂಲಿಮನಿ ಮುಂತಾದವರು ಉಪಸ್ಥಿತರಿದ್ದರು.

### ತಾಲೂಕಾ ಮಟ್ಟದ ಬರ ನಿರ್ವಹಣೆ, ಅಧಿಕಾರಿಗಳ ಸಭೆಯಲ್ಲಿ ಶಾಸಕ ಜಿ.ಎಸ್. ಪಾಟೀಲ

# ಭವಿಷ್ಯದ ಚಿಂತೆ ಮಾಡಬೇಡಿ

■ ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ತಾಲೂಕಿನಲ್ಲಿ 46 ಗ್ರಾಮಗಳಿದ್ದು, ಬೇಸಿಗೆಯಲ್ಲಿ ಹಳ್ಳಿಗಳಲ್ಲಿ ನೀರಿನ ಸಮಸ್ಯೆಯಾಗದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ಅಧಿಕಾರಿಗಳು ಮುಂದಾಗಬೇಕು ಎಂದು ಶಾಸಕ ಜಿ.ಎಸ್. ಪಾಟೀಲ ಸೂಚಿಸಿದರು.

ಇಲ್ಲಿನ ತಾ.ಪಂ ಕಚೇರಿಯಲ್ಲಿ ಬುಧವಾರ ನಡೆದ ತಾಲೂಕಾ ಮಟ್ಟದ ಬರ ನಿರ್ವಹಣೆ ಹಾಗೂ ಅಧಿಕಾರಿಗಳ ಸಭೆಯಲ್ಲಿ ಅವರು ಮಾತನಾಡಿದರು.

ಭವಿಷ್ಯದ ಚಿಂತೆ ಮಾಡಬೇಡಿ. ಹೊಳೆ ನೀರು ಬರಲಿ ಬಿಡಲಿ, ಅದರ ಬಗ್ಗೆ ಚಿಂತಿಸುವ ಬದಲು ತಾಲೂಕಿನಲ್ಲಿ ನೀರಿನ ಸಮಸ್ಯೆಯಾಗದಂತೆ ನೋಡಿಕೊಳ್ಳಿ. ಕೆರೆಗೆ ನೀರು ಹರಿಸಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ ಎಂದ ಅವರು, ನರೇಗಲ್ ಹಾಗೂ ಗಜೇಂದ್ರಗಡ ಸೇರಿ ಗ್ರಾ.ಪಂ ವ್ಯಾಪ್ತಿಯಲ್ಲಿ ಬರಗಾಲದ ಸಮಸ್ಯೆ ಆಗದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಈಗಾಗಲೇ ಸರ್ಕಾರ ಸೂಚಿಸಿದೆ. ಅಗತ್ಯ ಅನುದಾನ ಸಹ ಬಿಡುಗಡೆ ಆಗಲಿದೆ. ಮೇವಿನ ಕೊರತೆ ಉದ್ಭವವಾಗದಂತೆ ಹಾಗೂ ಗೋಶಾಲೆ ಆರಂಭಕ್ಕೆ ಸಿದ್ಧತೆಗಳನ್ನು ಅಧಿಕಾರಿಗಳು ಮಾಡಿಕೊಂಡಿರಬೇಕು. ಸರ್ಕಾರಿ ಹಾಗೂ ಖಾಸಗಿ ಕೊಳವೆಬಾವಿಗಳ ಪ್ರಸ್ತುತ ಮಾಹಿತಿಯೊಂದಿಗೆ ಖಾಸಗಿ ಕೊಳವೆ ಬಾವಿಗಳ ಮಾಲಿಕರೊಂದಿಗೆ ಒಪ್ಪಂದ ಮಾಡಿಕೊಂಡು ಟ್ಯಾಂಕರ್ ಮೂಲಕ ಜನತೆಗೆ ನೀರು ಪೂರೈಸಲು ಅಧಿಕಾರಿಗಳು ಸಿದ್ಧವಾಗಿರಬೇಕು ಎಂದರು.




ಗಜೇಂದ್ರಗಡ ಪಟ್ಟಣದಲ್ಲಿ ಪುರಸಭೆ ಅಧಿಕಾರಿಗಳಿಗೆ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಮಾಹಿತಿ ಪಡೆಯಲು ಶಾಸಕ ಜಿ.ಎಸ್. ಪಾಟೀಲ ಮುಂದಾದಾಗ, ಪುರಸಭೆ ಅಧಿಕಾರಿಗಳು ಅಸಮರ್ಪಕ ಉತ್ತರ ನೀಡಿದರು. ಇದಕ್ಕೆ ಅಸಮಾಧಾನ ವ್ಯಕ್ತಪಡಿಸಿದ ಶಾಸಕರು, ನೀರಿನ ಸಮಸ್ಯೆಯಾಗಂದತೆ ಎಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು ಎಂದು ತಾಕೀತು ಮಾಡಿ, ತಾಲೂಕಿನಲ್ಲಿ ಮೃತ ಜಾನುವಾರುಗಳಿಗೆ ಪರಿಹಾರ ನೀಡಿದ ಫಲಾನುಭವಿಗಳ ಪಟ್ಟಿಯನ್ನು ಒದಗಿಸುವಂತೆ ಪಶುಸಂಗೋಪನಾ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

ಈ ವೇಳೆ ಜಿಲ್ಲಾ ಉಪ ವಿಭಾಗಾಧಿಕಾರಿ ವೆಂಕಟೇಶ ನಾಯಕ, ತಹಸೀಲ್ದಾರ್ ಕಿರಣಕುಮಾರ ಕುಲಕರ್ಣಿ, ತಾ.ಪಂ ಇಒ ಡಾ. ಡಿ.ಮೋಹನ್ ಸೇರಿದಂತೆ ಕೃಷಿ, ಪಶುಸಂಗೋಪನೆ, ಪುರಸಭೆ, ಪ.ಪಂ ಪಿಡಿಒಗಳು, ಅಧಿಕಾರಿಗಳು ಹಾಗೂ ಮುಖಂಡರು ಭಾಗವಹಿಸಿದ್ದರು.

## ರಾಮೋತ್ಸವ, ಜೀಜಾಮಾತಾ ಜಯಂತ್ಯುತ್ಸವ

■ ವಿಜಯಸಾಕ್ಷಿ ಸುದ್ದಿ, ಗದಗ

ಇಲ್ಲಿನ ಮುಳಗುಂದ ನಾಕಾ ಹತ್ತಿರವಿರುವ ಮರಾಠಾ ವಿದ್ಯಾವರ್ಧಕ ಸಂಘದದಲ್ಲಿ ಜ.22ರ ಬೆಳಿಗ್ಗೆ 7.30ಕ್ಕೆ ಶ್ರೀ ಜಗದಂಬಾ ದೇವಿಯ ಅಭಿಷೇಕ ಪೂಜೆಯೊಂದಿಗೆ ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ಉದ್ಘಾಟನೆಯ ನಿಮಿತ್ತ ಬೆಳಿಗ್ಗೆ 10.30ಕ್ಕೆ ಶ್ರೀ ರಾಮ ಪೂಜೆಯೊಂದಿಗೆ ರಾಮನಾಮ ಜಪ, ಶ್ರೀ ಲಲಿತಾ ಸಹಸ್ರನಾಮ ಕಾರ್ಯಕ್ರಮ ಜರುಗುವುದು. ನಂತರ ಮಧ್ಯಾಹ್ನ 12 ಗಂಟೆಗೆ ಶ್ರೀ ರಾಜಮಾತಾ ಜೀಜಾಬಾಯಿ ಜಯಂತ್ಯುತ್ಸವ ನಡೆಯಲಿದೆ.

ಮರಾಠಾ ವಿದ್ಯಾವರ್ಧಕ ಸಂಘ ಗದಗ-ಬೆಟಗೇರಿ, ಪಾಲಕಿ ಸೇವಾ ಉತ್ಸವ ಸಮಿತಿ, ಶ್ರೀ ರಾಜಮಾತಾ ಜೀಜಾಬಾಯಿ ಮಹಿಳಾ ಮಂಡಳ, ಶ್ರೀ ಛತ್ರಪತಿ ಶಿವಾಜಿ ಯುವಕ ಸಂಘಗಳ ಸರ್ವ ಸದಸ್ಯರು ಹಾಗೂ ಸಮಾಜ ಬಾಂಧವರು ಸಭೆಯಲ್ಲಿ ಪಾಲ್ಗೊಳ್ಳಬೇಕೆಂದು ಸಂಘದ ಅಧ್ಯಕ್ಷ ವಿನಿತಕುಮಾರ ವ್ಹಿ.ಜಗತಾಪ ಹಾಗೂ ಗೌರವ ಕಾರ್ಯದರ್ಶಿ ಶಿವಾಜಿ ವಾಯ್. ಗ್ವಾರಿ ಪ್ರಕಟಣೆ ಮೂಲಕ ವಿನಂತಿಸಿದ್ದಾರೆ.

## ನಗುತ್ತ ಬಾಳಿ, ಶತಾಯುಷಿಗಳಾಗಿ



■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಮನುಷ್ಯನ ಬದುಕು ಯಾವಾಗಲೂ ಚಿಂತೆಯಿಂದ ಕೂಡಿದ ಒಂದು ಸಂತೆಯಾಗಿದೆ. ಹೀಗಾಗಿ ಅವನು ನಗುವುದನ್ನೇ ಕಡಿಮೆ ಮಾಡಿದ್ದಾನೆ. ಎಲ್ಲರೂ ನಗುನಗುತ್ತ ಬಾಳಿ, ಶತಾಯುಷಿಗಳಾಗಿರಿ ಎಂದು ಖ್ಯಾತ ನಗೆ ಭಾಷಣಕಾರ ಗಂಗಾವತಿ ಪ್ರಾಣೇಶ್ ಹೇಳಿದರು.

ಅವರು ಸಮೀಪದ ಹಾಲಕೆರೆ ಗ್ರಾಮದ ಶ್ರೀ ಅನ್ನದಾನೇಶ್ವರ ಜಾತ್ರಾ ಮಹೋತ್ಸವದಲ್ಲಿ ತಮ್ಮ ಸಂಗಡಿಗರೊಂದಿಗೆ ಹಾಸ್ಯ ಸಂಜೆ ಕಾರ್ಯಕ್ರಮ ನೀಡಿ ಮಾತನಾಡಿದರು.

ನಗುವೆಂಬ ವರವನ್ನು ದೇವರು ಮನುಷ್ಯನಿಗೆ ಕೊಡದೆ ಹೋಗಿದ್ದರೆ ಏನಾಗುತ್ತಿತ್ತು ಎಂಬುದನ್ನು ಎಲ್ಲರೂ ಒಂದು ಕ್ಷಣ ಯೋಚಿಸಬೇಕು. ಭಗವಂತ ಮನುಷ್ಯನಿಗೆ ಎರಡು ದೊಡ್ಡ ವರಗಳನ್ನು ನೀಡಿದ್ದಾನೆ. ಒಂದು ಮರೆವು, ಇನ್ನೊಂದು ನಗು. ಭಗವಂತ ನೀಡಿರುವ ಈ ವರಗಳನ್ನು ಬಳಸಿಕೊಂಡು ಮನುಷ್ಯ ನಿಶ್ಚಿಂತನಾಗಿ ಜೀವನ ಸಾಗಿಸುವುದನ್ನು ಕಲಿಯಬೇಕೆಂದು ಹೇಳಿದರು.

ವೇದಿಕೆಯ ಮೇಲೆ ಶ್ರೀ ಮುಪ್ಪಿನ ಬಸವಲಿಂಗ ಮಹಾಸ್ವಾಮಿಗಳನ್ನೊಳಗೊಂಡಂತೆ ಅನೇಕ ಹರಗುರು ಚರ ಮೂರ್ತಿಗಳು, ಕುಷ್ಟಗಿಯ ಮಾಜಿ ಶಾಸಕ ಅಮರೇಗೌಡ ಬಯ್ಯಾಪುರ ಉಪಸ್ಥಿತರಿದ್ದರು. ನಂತರ ಹಾಸ್ಯ ಕಲಾವಿದ ಬಸವರಾಜ ಮಹಾಮನಿ, ನರಸಿಂಹ ಜೋಷಿಯವರ ಮಿಮಿಕ್ರಿ, ಹಾಡು, ಅಭಿನಯ ಎಲ್ಲವೂ ನೆರೆದ ಪ್ರೇಕ್ಷಕರ ಮನಸೂರೆಗೊಂಡವು. ಆರ್.ಕೆ. ಬಾಗವಾನ ನಿರೂಪಿಸಿದರು. ಪ್ರಾಧ್ಯಾಪಕ ಡಾ. ಕಲ್ಲಯ್ಯ ಹಿರೇಮಠ ಸ್ವಾಗತಿಸಿದರು. ನಿವೃತ್ತ ಶಿಕ್ಷಕ ಎಂ.ಎಸ್. ದಢೇಸೂರಮಠ ವಂದಿಸಿದರು.

## ಮೂಲಸೌಕರ್ಯ ಒದಗಿಸಲು ಜಿಲ್ಲಾಧಿಕಾರಿಗೆ ಮನವಿ

■ ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ಶಿರಹಟ್ಟಿ ಪಟ್ಟಣದ ಸಿಸಿಎನ್ ಸರಕಾರಿ ಪ್ರೌಢಶಾಲೆಗೆ ಮೂಲ ಸೌಕರ್ಯಗಳನ್ನು ಒದಗಿಸಿ ಕೊಡಬೇಕೆಂದು ಪಟ್ಟಣ ಪಂಚಾಯಿತಿ ಮಾಜಿ ಅಧ್ಯಕ್ಷ ಹಾಗೂ ಎಸ್‌ಡಿಎಂಸಿ ಅಧ್ಯಕ್ಷ ನಾಗರಾಜ ಲಕ್ಕುಂಡಿ, ಜಿಲ್ಲಾ ಮಾಧ್ಯಮಿಕ ಶಾಲಾ ಶಿಕ್ಷಕರ ಅಧ್ಯಕ್ಷ ಎಂ.ಕೆ. ಲಮಾಣಿ ನೇತೃತ್ವದಲ್ಲಿ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ಅವರಿಗೆ ಮನವಿ ಸಲ್ಲಿಸಿದರು.



ಈ ಸಂದರ್ಭದಲ್ಲಿ ಮಾತನಾಡಿದ ನಾಗರಾಜ ಲಕ್ಕುಂಡಿ, ಬಿಜೆಪಿ ತಾಲೂಕಾಧ್ಯಕ್ಷ ಫಕ್ಕೀರೇಶ ರಟ್ಟಿಹಳ್ಳಿ, 2006-07ರಲ್ಲಿಯೇ ಶಾಲೆ ಪ್ರಾರಂಭವಾಗಿದೆ. ಪ್ರಸಕ್ತ ವರ್ಷದಲ್ಲಿ 8ನೇ ತರಗತಿಗೆ 183, 9ನೇ ತರಗತಿಗೆ 191 ಹಾಗೂ 10ನೇ ತರಗತಿಗೆ 139 ಹೀಗೆ ಒಟ್ಟು 493 ವಿದ್ಯಾರ್ಥಿಗಳು ದಾಖಲಾಗಿದ್ದಾರೆ.

ಸತತವಾಗಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡುತ್ತಾ ಬಂದಿದೆ. ಆದರೆ ಕಳೆದ ನಾಲ್ಕು ವರ್ಷಗಳಿಂದ ಶಾಲೆಗೆ ಇಲಾಖೆಯ ವಾಹನಗಳು ಹಾಗೂ ಅಕ್ಷರ ದಾಸೋಹದ ಪಡಿತರ ವಾಹನಗಳು ಬರಲು ದಾರಿಯ ತೊಂದರೆಯಾಗಿದೆ.

ಹೀಗಾಗಿ, ಶಾಲೆಗೆ ಅಗತ್ಯವಿರುವ ಸಮರ್ಪಕ ರಸ್ತೆ, ಸಭಾಭವನ, ಕಂಪೌಂಡ್ ನಿರ್ಮಾಣ ಇತ್ಯಾದಿ ಬೇಡಿಕೆಗಳನ್ನು ತಮ್ಮ ಅನುದಾನದಡಿಯಲ್ಲಿ ಮಾಡಿಸಿಕೊಡಬೇಕೆಂದು ಮನವಿ ಮೂಲಕ ವಿನಂತಿಸಿದರು.

ಶಾಲೆಯ ಮುಖ್ಯೋಪಾಧ್ಯಾಯ ಗಣೇಶ ಈರಕ್ಕನವರ, ವೆಂಕಟೇಶ ಅರ್ಕಸಾಲಿ, ವೀರಣ್ಣ ಅಂಗಡಿ, ಸಿದ್ದಪ್ಪ ಸ್ವಾಮಿ ಮುಂತಾದವರು ಉಪಸ್ಥಿತರಿದ್ದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka